ಉಪನ್ಯಾಸ ಗ್ರಂಥಮಾಲೆ
೩೫೧

ಕನ್ನಡ ಕವಿಗಳು ಕಂಡ ನಾಲ್ಕು ಹಬ್ಬಗಳು

ವ್ಹಿ. ಎ. ಜೋಶಿ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
ಜುಲೈ ೧೯೬೩

ಉಪನ್ಯಾಸ ಗ್ರಂಥಮಾಲೆ
೩೫೧

ಕನ್ನಡ ಕವಿಗಳು ಕಂಡ ನಾಲ್ಕು ಹಬ್ಬಗಳು

ವ್ಹಿ. ಎ. ಜೋಶಿ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೬೩

(ಸಗಟು ಪುಸ್ತಕ ವ್ಯಾಪಾರಿಗಳು)
53.
(ದೂರವಾಣಿ : 24226)

ಪ್ರಕಾಶಕರು :

ಎಸ್. ಬಿ. ನಾಯಕ

ಕಾರ್ಯನಿರ್ವಾಹಕ ನಿರ್ದೇಶಕರು,

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು

ಜುಲೈ, ೧೯೮೩

©ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಬೆಲೆ : ೫೦ ಪೈಸೆ

ಮುದ್ರಕರು :

ಅಶೋಕ ಎಲ್. ಅಕಳವಾಡಿ

ವಾಸವಿ ಪ್ರಿಂಟರ್ಸ್

ಬ್ಯಾಂಕ ರೋಡ, ಧಾರವಾಡ-೫೮೦ ೦೦೧

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು, ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕ ಶಾಸ್ತ್ರ, ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ

ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವ ದಲ್ಲದೆ ಎಂತಹ ವಿಷಯುವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯುಲ್ಲಿ ಬರವಣಿಗೆಯುಲ್ಲಿಳಿಸುವ ಅವಕಾಶ ದೊರೆಯುುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮುನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯು.

ಈ ಮಾಲೆಯುಲ್ಲಿ ಈಗಾಗಲೇ ೩೫೦ ಪುಸ್ತಕಗಳು ಪ್ರಕಟ ವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿ ರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯು ಉಪಯುುಕ್ತತೆಯುನ್ನೂ, ಜನಪ್ರಿಯುತೆಯುನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯು ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯುದ ಈ ಸೇವೆಯು ಸಂಪೂರ್ಣ ಪ್ರಯೋ ಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯುಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯು
ಧಾರವಾಡ

ಡಿ. ಎಂ ನಂಜುಂಡಪ್ಪ
ಕುಲಪತಿಗಳು

ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ೨೫ಳನೆಯ ಉಪನ್ಯಾಸ ಶಿಬಿರ ಉತ್ತರ ಕನ್ನಡ ಜಿಲ್ಲೆಯ ಬರಬಳ್ಳಿ (ಯಲ್ಲಾಪುರ ತಾಲೂಕು) ಯಲ್ಲಿ ೧೯೮೧ ಜನೆವರಿ ೧೦ ಹಾಗೂ ೧೧ ರಂದು ನಡೆಯಿತು. ಈ ಉಪನ್ಯಾಸ ಶಿಬಿರದ ಅಂಗವಾಗಿ ಕನ್ನಡ 'ಕವಿಗಳು ಕಂಡ ನಾಲ್ಕು ಹಬ್ಬಗಳು' ಕುರಿತು ನಾನು ನೀಡಿದ ಭಾಷಣದ ವಿಸ್ತೃತ ರೂಪವೇ ಈ ಚಿಕ್ಕ ಪುಸ್ತಿಕೆ.

ನಮ್ಮ ಸಂಸ್ಕೃತಿಯಲ್ಲಿ ಹಬ್ಬಗಳು ಮಹತ್ವದ ಸ್ಥಾನ ಪಡೆದಿವೆಯಷ್ಟೆ. ಪ್ರಸ್ತುತ ಪುಸ್ತಿಕೆಯಲ್ಲಿ ಹಬ್ಬಗಳ ಸಾಮಾನ್ಯ ಸ್ವರೂಪದ ಜೊತೆಗೆ ನಾಲ್ಕು ಪ್ರಮುಖ ಹಬ್ಬಗಳ ಸ್ಥೂಲ ನಿರೂಪಣೆ ಇದೆ. ಯುಗಾದಿ, ವಿಜಯ ದಶಮಿ, ದೀಪಾವಳಿ ಹಾಗೂ ಹೋಳಿಹಬ್ಬ ಇವು ಇಲ್ಲಿ ಆಯ್ದುಕೊಂಡಿರುವ ನಾಲ್ಕು ಹಬ್ಬಗಳು. ಈ ಹಬ್ಬಗಳ ಹಿನ್ನೆಲೆ ಹಾಗೂ ಆಚರಣೆಗಳನ್ನು ಕನ್ನಡ ಕವಿಗಳು ಕಂಡ ರೀತಿಯಲ್ಲಿ ಇಲ್ಲಿ ನಿರೂಪಿಸಿದೆ. ಪುಸ್ತಿಕೆಯಲ್ಲಿ ಕವಿಗಳ ಉಲ್ಲೇಖದೊಡನೆ ಕವನಗಳನ್ನೂ ಉದಾಹರಿಸಿದ್ದು, ಅವುಗಳ ಅಡಿಯಲ್ಲಿ ಸಂಬಂಧಿಸಿದ ಕವನದ ಹೆಸರು ಹಾಗೂ ಸಂಕಲನದ ಹೆಸರು ಇವನ್ನು ಕ್ರಮವಾಗಿ ಕೊಟ್ಟಿದೆ. ಹಬ್ಬಗಳ ಕುರಿತು ಸಾಮಾನ್ಯ ಮಾಹಿತಿ ಸಂಗ್ರಹಿಸುವಲ್ಲಿ ಡಾ॥ ಬೇಟಗೇರಿ ಕೃಷ್ಣಶರ್ಮಾ ಅವರ 'ನಮ್ಮ ಸಂಸ್ಕೃತಿ

ಪರಂಪರೆ ಹಾಗೂ ಪ್ರೊ॥ ಡಿ.ಟಿ. ರಂಗಸ್ವಾಮಿ ಅವರ 'ಭಾರತದ ಹಬ್ಬ ಹರಿದಿನಗಳು'—ಈ ಗ್ರಂಥಗಳ ನೆರವು ಪಡೆದಿರುವೆ. 'ಕನ್ನಡ ಕವಿಗಳು ಕಂಡ ಹಬ್ಬಗಳು' ಕುರಿತು ನಾನು ಈ ಹಿಂದೆ 'ಸಂಯುಕ್ತ ಕರ್ನಾಟಕ' ಹಾಗೂ 'ಕನ್ನಡ ಪ್ರಭ' ಪತ್ರಿಕೆಗಳಲ್ಲಿ ಬರೆದ ಮತ್ತು ಧಾರವಾಡ ಆಕಾಶವಾಣಿಯಿಂದ ಪ್ರಸಾರ ಗೊಳಿಸಿದ ಲೇಖನಗಳ ರೂಪರೇಷೆಗಳು ಇಲ್ಲಿ ನೆರವಾಗಿವೆ.

ಈ ಉಪನ್ಯಾಸ ನೀಡಲು ಅವಕಾಶ ಕಲ್ಪಿಸಿ ಕೊಟ್ಟ ಪ್ರಸಾರಾಂಗದ ಆಗಿನ ನಿರ್ದೇಶಕರಾಗಿದ್ದ ಶ್ರೀ ಚೆನ್ನವೀರ ಕಣವಿ ಅವರಿಗೂ, ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಎಸ್.ಬಿ. ನಾಯಕ ಅವರಿಗೂ ಋಣಿಯಾಗಿರುವೆ. ಶಿಬಿರದಲ್ಲಿ ಉಪನ್ಯಾಸಕರೊಂದಿಗಿದ್ದು ಸಹಕರಿಸಿದ ಪ್ರಸಾರಾಂಗದ ಸಹಾಯಕ ನಿರ್ದೇಶಕರಾದ ಶ್ರೀ ಎಲ್.ಎಂ. ಗುಡ್ಡೀನ ಅವರಿಗೆ ಮತ್ತು ಶಿಬಿರದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಬರಬಳ್ಳಿಯ ಅರುಣೋದಯ ಯುವಕ ಮಂಡಳಿಯ ಪದಾಧಿಕಾರಿಗಳಿಗೆ ಕೃತಜ್ಞತೆಗಳು. ಶಿಬಿರದಲ್ಲಿ ಜೊತೆಯಲ್ಲಿದ್ದ ವಜ್ರಳ್ಳಿಯ ಸರ್ವೋದಯ ಹೈಸ್ಕೂಲಿನ ಶ್ರೀ ಎಸ್.ಜಿ. ಭಟ್ಟ ಅವರನ್ನಿಲ್ಲಿ ನೆನೆಯುವೆ. ಅಂದಿನ ಉಪನ್ಯಾಸದಲ್ಲಿ ಬರಬಳ್ಳಿಯ ಗ್ರಾಮಸಮೂಹದ ನಾಗರಿಕರು ತೋರಿದ ಆಸಕ್ತಿಯನ್ನು ಇಲ್ಲಿ ನೆನೆಯದಿರಲಾರೆ.

ಗೋಖಲೆ ಸೆಂಟಿನರಿ ಕಾಲೇಜ
ಅಂಕೋಲಾ (ಉ.ಕ)
೧೫-೭-೧೯೮೩

ವಿ.ಎ. ಜೋಶಿ

ಪರಿವಿಡಿ

೧. ಹಬ್ಬಗಳ ಸಾಮಾನ್ಯ ಸ್ವರೂಪ

ಭಾರತೀಯ ಸಂಸ್ಕೃತಿಯಲ್ಲಿ ಹಬ್ಬಗಳು ತುಂಬ ಮಹತ್ವದ ಸ್ಥಾನ ಪಡೆದಿವೆ. ಅವು ನಮ್ಮ ಧಾರ್ಮಿಕ ಶ್ರದ್ಧೆಯ ಸಂಕೇತವಾಗಿ ಶತಮಾನಗಳಿಂದ ಉಳಿದುಕೊಂಡಿವೆ. ಇಹದ ಬದುಕಿಗೆ ಹಾಗೂ ಪರದ ಚಿಂತನೆಗೆ ಹಬ್ಬವನ್ನು ಸಾಧನವೆಂದು ಬಳಸಿಕೊಳ್ಳಲಾಗುತ್ತಿದೆ. ಅವು ನಮ್ಮ ಆಧ್ಯಾತ್ಮಿಕ ಶಕ್ತಿಯನ್ನು ಬಲಗೊಳಿಸುವ ಉದ್ದೇಶ ಹೊಂದಿವೆ. ಜೀವನದ ಮೂಲ ಗುರಿಯು ಧರ್ಮ ಸಾಧನೆ ಎಂದು ನಮ್ಮ ಸನಾತನ ನಂಬಿಕೆಯಷ್ಟೆ. ಈ ನಂಬಿಕೆಯ ನೆರಳಿನಲ್ಲಿ ಹಬ್ಬ ಹರಿದಿನಗಳು ರೂಪುಗೊಂಡಿವೆ. ಶುಚಿರುಚಿಯಾದ ಜೀವನ ರಚನೆ ಹಬ್ಬಗಳ ಹಿನ್ನೆಲೆಯಲ್ಲಿ ಹುದುಗಿದೆ. ನೈತಿಕ ಮೌಲ್ಯಗಳ ಉದ್ದೀಪನವೂ ಇವುಗಳ ವಿಶಾಲ ಧ್ಯೇಯಗಳಲ್ಲಿ ಒಂದಾಗಿದೆ.

ಹಬ್ಬಗಳಿಗೆ ನಂಬಿಕೆ ಮತ್ತು ಆಚರಣೆ ಎಂಬ ಎರಡು ಮುಖಗಳುಂಟು. ಇವು ಪರಸ್ಪರ ಪೂರಕ ಅಂಶಗಳಾಗಿವೆ. ನಂಬಿಕೆ ಮೂಲ ಶ್ರದ್ಧೆಗೆ ಸಂಬಂಧಿಸಿದುದಾಗಿದೆ. ಆಚರಣೆ ಆ ನಂಬಿಕೆಯನ್ನು ಆಧರಿಸಿದ ಕ್ರಿಯೆಗೆ ಸಂಬಂಧಪಟ್ಟಿದೆ. ನಂಬಿಕೆ ದೃಢವಾಗಿದ್ದರೆ ಮಾತ್ರ ಆಚರಣೆ ಫಲಪ್ರದವಾಗಲು ಸಾಧ್ಯ. ಕೆಲವೊಮ್ಮೆ ನಂಬಿಕೆಯ ತಳಹದಿ ಭದ್ರವಾಗಿರದಿದ್ದರೂ ಆಚರಣೆ ಗೋಚರಿಸುವುದುಂಟು, ಇಂಥ ಆಚರಣೆ ನಂಬಿಕೆಗೆ ಗೈಯುವ

ದ್ರೋಹವಾಗಿದೆ. ಇದು ಆತ್ಮವಂಚನೆಯೂ ಆಗಿರುವ ಸಂಭವ ವಿದೆ.

ಹಬ್ಬಗಳ ಪ್ರಯೋಜನಗಳನ್ನು ಸ್ಥೂಲವಾಗಿ ಆಧ್ಯಾತ್ಮಿಕ ಹಾಗೂ ಲೌಕಿಕ ಎಂದು ವಿಂಗಡಿಸಬಹುದು. ಆಧ್ಯಾತ್ಮಿಕ ಅವರ ವರ ನಂಬಿಕೆಗಳಿಗೆ ಅನುಗುಣವಾಗಿರುತ್ತದೆ. ಹಬ್ಬಗಳ ನಿಷ್ಠಾ ಪೂರ್ಣ ಆಚರಣೆ ಸದ್ಗತಿಗೆ ದಾರಿ ಎಂದು ಆಸ್ತಿಕರ ನಂಬಿಕೆ, ದೇವತ್ವದ ನಿಜವನ್ನು ಅರಿಯಲು ಇವು ನೆರವಾಗುವವೆಂದು ಅವರ ವಿಶ್ವಾಸ. ನಮ್ಮ ಈ ಹಬ್ಬಗಳು ಕೂಡ ಹಲವಾರು ದೇವರು ಗಳೊಡನೆ ಹೆಣೆದುಕೊಂಡಿರುವುದನ್ನು ನೆನೆಯಬಹ ದು. ದೇವರ ಲೀಲೆಗಳ ನೆನಪುಗಳು ದೇವತ್ವದ ಕುರಿತು ಭಕ್ತಿ, ಶ್ರದ್ಧೆ ಗಳು ಹುಟ್ಟುವಂತೆ ದೃಢಪಡುವಂತೆ ಹಬ್ಬಗಳ ಯೋಜನೆ ಇದೆ. ಹಬ್ಬಗಳ ಲೌಕಿಕ ಪ್ರಯೋಜನಗಳು ತುಂಬ ವ್ಯಾಪಕವಾಗಿರು ವುದನ್ನು ಗಮನಿಸಬೇಕು. ಹಬ್ಬಗಳು ಕಾಲಿಕ್ಕುತ್ತಿರುವಂತೆಯೆ ಮನೆ ಮಠಗಳು ತಮ್ಮ ಧೂಳು ಕೊಡಹಿಕೊಂಡು, ಮೈ ಮುರಿದು ಮೇಲೇಳುವವು. ಮನೆಗಳಿಗೆ ಈಗ ಸ್ವಚ್ಛತೆಯು ದೀಕ್ಷೆ ದೊರೆವುದು. ಜೊತೆಗೆ, ಸುಣ್ಣ-ಬಣ್ಣಗಳು, ತಳಿರು-ತೋರಣಗಳು ಮನೆಯ ಅಂದವನ್ನು ಇನ್ನಷ್ಟು ಹೆಚ್ಚಿಸುವವು. ಬಂಧು-ಬಾಂಧವರು, ಇಷ್ಟ-ಮಿತ್ರರು ಹಬ್ಬಗಳ ನೆಪದಲ್ಲಿ ಸಂಧಿಸುವುದುಂಟು. ಇದು ಆಚರಣೆಯ ಸಡಗರವನ್ನು ಹೆಚ್ಚಿ ಸುವುದು. ಮಕ್ಕಳಿಗೆ ಉಮೇದು, ಹೆಂಗಸರಿಗೆ ಹೊಣೆಗಾರಿಕೆ, ಹಿರಿಯರಿಗೆ ಕಾರ್ಯಭಾರ–ಇವನ್ನು ಹಬ್ಬಗಳು ಜೊತೆಯಾಗಿ ಒದಗಿಸುವವು. ಆಬಾಲ ವೃದ್ಧರಲ್ಲಿ ಉತ್ಸಾಹದ ಚಿಲುಮೆ ಈಗ

ಚಿಮ್ಮುವುದು. ಹಲವು ಪೂಜಾವಿಧಿಗಳಿಂದಾಗಿ ಇಡೀ ಮನೆಯ ವಾತಾವರಣದಲ್ಲಿ ಉತ್ಸಾಹ ಭಕ್ತಿಗಳು ಹೊನಲಾಗಿ ಹರಿವವು. ಭಜನೆ ಹಾಗೂ ಪ್ರಾರ್ಥನೆಗಳು ಹಬ್ಬ-ಹರಿದಿನಗಳ ಅಂಗಗಳಾಗಿ ಸೇರಿಕೊಂಡಿರುವವು. ಇವೆಲ್ಲ ಸಾಮೂಹಿಕ ಭಕ್ತಿ ಸಾಧನೆಯ ವಿಧಾನಗಳಾಗಿವೆ.

"ಅನಾದಿಕಾಲದಿಂದ ಭಾರತವನ್ನು ಶಕ್ತಿಶಾಲಿಯಾಗಿ ಬೆಳಗಿಸಿ, ಮುಂದುವರೆಸುತ್ತಿರುವುದು ಯಾವುದೊ ರಹಸ್ಯ ತತ್ವವಲ್ಲ, ಅಲೌಕಿಕ ಜ್ಞಾನವಲ್ಲ. ಅದು ಮೃದು ಮಧುರವಾದ ಮಾನವೀಯ ಗುಣ, ವೈವಿಧ್ಯಮಯ ಸಹಿಷ್ಣು ಸಂಸ್ಕೃತಿ, ಯುಗದಿಂದ ಯುಗಕ್ಕೆ ಭಾರತದ ಅನಂತ ಶಕ್ತಿ ಪ್ರವಹಿಸುತ್ತಿರುವುದು ಇವುಗಳಿಂದಲೇ" ಎಂದು ಪಂಡಿತ ಜವಾಹರಲಾಲ ನೆಹರೂ ಅವರು ಹೇಳಿದ್ದು ನಮ್ಮ ಹಬ್ಬಗಳಿಗೆ ವಿಶೇಷವಾಗಿ ಅನ್ವಯಿಸುತ್ತಿದೆ. ಅವು ನಮ್ಮ ಘನವಾದ ಸಾಂಸ್ಕೃತಿಕ ಪರಂಪರೆಯ ಪ್ರತಿನಿಧಿಗಳಾಗಿವೆ, ಆಧ್ಯಾತ್ಮಿಕ ಹಿರಿಮೆ ನಮ್ಮ ನಡೆ-ನುಡಿಗಳಲ್ಲಿಯ ನಮ್ಮ ಧಾರ್ಮಿಕ ಶ್ರದ್ಧೆಯಲ್ಲೂ ಜೀವಂತವಾಗಿ ಉಳಿದಿದೆ. ಅಂತೆಯೆ ಹಲವು ಸೋಲುಗಳನ್ನು ಅನುಭವಿಸಿಯೂ ನಾವು ಜೀವಂತ ಜನಾಂಗವಾಗಿ ಉಳಿದಿದ್ದೇವೆ, ಬೆಳೆದಿದ್ದೇವೆ. ಖ್ಯಾತ ತತ್ವವೇತ್ತ ಡಾ|| ಎಸ್. ರಾಧಾಕೃಷ್ಣನ್ ಅವರು ಅಭಿಪ್ರಾಯಪಟ್ಟಿರುವಂತೆ, "ಭಾರತ ಎಂದೂ ಪರಾಭವ ಹೊಂದಿಲ್ಲ, ಅದರ ಆಧ್ಯಾತ್ಮಿಕ ಜ್ಯೋತಿ ಇನ್ನೂ ಉರಿಯುತ್ತಲೆ ಇದೆ. ಅದು ಪ್ರಮಾದಗಳನ್ನು ಮಾಡಿರಬಹುದು ಆದರೆ ಅವನ್ನು ಸರಿಪಡಿಸಿಕೊಂಡು ಮುನ್ನುಗ್ಗುವ ಶಕ್ತಿ ಅದಕ್ಕಿದೆ."

ಆದರೆ, ಇಂದು ಹಬ್ಬಗಳ ಮೂಲ ಸತ್ವ ಮರೆಯಾಗಿರುವುದು ನಗ್ನಸತ್ಯ. ಅವುಗಳ ಹಿಂದಿನ ನಂಬಿಕೆ, ಆಚರಣೆಯ ನಿಷ್ಠೆ ಇಂದು ತೀರ ವಿರಳವಾಗಿ ಕಾಣ ಸಿಗುತ್ತವೆ. ಅವುಗಳ ಆಡಂಬರದ ವಿಕೃತ ರೂಪ ಮಾತ್ರ ಉಳಿದುಕೊಂಡಿದೆ, ಆಚರಣೆಯ ಪವಿತ್ರತೆ ಔಷಧಿಗೂ ಸಿಕ್ಕುತ್ತಿಲ್ಲ. ಬದಲಾದ ಜೀವನ ಮೌಲ್ಯಗಳು ಕೂಡ ಹಬ್ಬಗಳ ಹಿನ್ನಡೆಗೆ ಕಾರಣವಾಗಿರಬಹುದು. ಭರದಿಂದ ನಶಿಸಿ ಹೋಗುತ್ತಿರುವ ಆಸ್ತಿಕತೆ, ಕುಸಿದು ಬೀಳುತ್ತಿರುವ ಹಳೆಯ ನಂಬಿಕೆಗಳು – ಹಬ್ಬಗಳ ಅಡಿಪಾಯವನ್ನು ಅಲ್ಲಾಡಿಸುತ್ತಿವೆ. ನಮ್ಮಲ್ಲಿಯೆ ಹಲವರು ಇವುಗಳ ಆಚರಣೆಯನ್ನು ಆಡಂಬರ, ಸ್ವಪ್ರತಿಷ್ಠೆಗಳ ಪ್ರದರ್ಶನಕ್ಕೆ ಬಳಸಿಕೊಳ್ಳುತ್ತಿರುವುದು ಇನ್ನಷ್ಟು ಕೆಟ್ಟ ಪ್ರವೃತ್ತಿಯಾಗಿದೆ. ಇದು ನಿಜಕ್ಕೂ ಹಬ್ಬಗಳಿಗೆ ನಾವು ಗೈಯ್ಯುತ್ತಿರುವ ಅಪಚಾರ. ಆಳವಾದ ನಂಬಿಕೆ ಮತ್ತು ಉತ್ತಮ ಆಚಾರ ಬೇರೂರಿದರೆ ಮಾತ್ರ ನಾವು ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಬಲ್ಲೆವು.

ಬದುಕನ್ನು ತೆರೆದ ಕಣ್ಣುಗಳಿಂದ ನೋಡುತ್ತ ಬಂದಿರುವ ಕವಿಗಳು, ನಮ್ಮ ಹಬ್ಬ ಹರಿದಿನಗಳ ಕಡೆಗೆ ವಿಶೇಷ ಗಮನ ಹರಿಸಿರುವರು. ಅವುಗಳ ಹಿನ್ನೆಲೆ ಹಾಗೂ ಆಚರಣೆಗಳ ವೈಶಿಷ್ಟ್ಯಗಳನ್ನು ಅವರು ತಮ್ಮ ಕವನಗಳಲ್ಲಿ ಮನಂಬುಗುವಂತೆ ಮೂಡಿಸಿರುವರು. 'ರವಿ ಕಾಣದ್ದನ್ನು ಕವಿ ಕಾಣುತ್ತಾನೆ' ಅನ್ನುವುದಕ್ಕೆ ಒಂದು ದೃಷ್ಟಾಂತ ಇಂಥ ನಿರೂಪಣೆಗಳಲ್ಲಿ ಗೋಚರಿಸುತ್ತಿದೆ. ಜೊತೆಗೆ, ನಮ್ಮ ಹಬ್ಬಗಳ ಸಾಂಸ್ಕೃತಿಕ ಸ್ವರೂಪ ದರ್ಶನ ಕವಿಗಳ ನಿರೂಪಣೆಯಲ್ಲಿ ಆಗುತ್ತಿದೆ. ಬಾಹ್ಯಾಡಂಬರಕ್ಕೆ ಮನ

ಸೋತ ಜನ ಹಬ್ಬಗಳಿಗೆ ನೀಡಿದ ವಿಕೃತ ಸ್ವರೂಪದ ವಿಡಂಬನೆಯೂ ಇಲ್ಲಿದೆ. ಎಲ್ಲಕ್ಕೂ ಮಿಗಿಲಾಗಿ, ಅನುದಿನದ ಬದುಕಿಗೆ ಹಬ್ಬಗಳು ನೀಡುವ ಪ್ರೇರಣೆ, ಸಂದೇಶಗಳ ನಿರೂಪಣೆ ಕವಿವಾಣಿಯಲ್ಲಿ ಹುದುಗಿದೆ. ಅಂತೆಯೆ, ಹಬ್ಬಗಳ ಕುರಿತು ಕವಿದೃಷ್ಟಿ ತುಂಬ ಮಹತ್ವದ್ದೆನಿಸುತ್ತಿದೆ.

ಯುಗಾದಿ, ವಿಜಯದಶಮಿ, ದೀಪಾವಳಿ ಹಾಗೂ ಹೋಳಿ ಹಬ್ಬ ಈ ನಾಲ್ಕು ಹಬ್ಬಗಳನ್ನು ಕೈಗೆತ್ತಿಕೊಂಡು, ಕನ್ನಡ ಕವಿಗಳು ಕಂಡಂತೆ ಅವುಗಳ ಸ್ವರೂಪವನ್ನು ಗುರುತಿಸುವ ಹವಣಿಕೆ ಈ ಪುಸ್ತಿಕೆಯ ಮುಂದಿನ ಪುಟಗಳಲ್ಲಿದೆ. (ಕವಿಗಳ ಉಲ್ಲೇಖದೊಡನೆ ಕವನಗಳನ್ನು ಭಾಗಶಃ ಉದಾಹರಿಸಿದ್ದು, ಅವುಗಳ ಅಡಿಯಲ್ಲಿ ಸಂಬಂಧಿಸಿದ ಕವನದ ಹೆಸರು ಹಾಗೂ ಸಂಕಲನದ ಹೆಸರು ಇವನ್ನು ಕ್ರಮವಾಗಿ ಕೊಟ್ಟಿದ್ದು, ಕವನದ ಹೆಸರುಗಳನ್ನು ಅವತರಣಿಕೆ ಚಿಹ್ನೆಯಲ್ಲಿ ಸೂಚಿಸಲಾಗಿದೆ.)

೨. ಯುಗಾದಿ

ಯುಗಾದಿ ಹಳೆಯ ಹಾಗೂ ಹೊಸ ವರ್ಷಗಳನ್ನು ಜೋಡಿಸುವ ಸೇತುವೆಯಾಗಿದೆ. ಫಾಲ್ಗುಣ ಅಮಾವಾಸ್ಯೆ ವರ್ಷದ ಕೊನೆಯ ದಿನ, ಇದಕ್ಕೆ ಯುಗಾದಿ ಅಮಾವಾಸ್ಯೆ ಅನ್ನುವುದುಂಟು. ಮರುದಿನವೆ ಚೈತ್ರಶುದ್ಧ ಪ್ರತಿಪದೆ, ಯುಗಾದಿ, ಹೊಸ ವರ್ಷದ ಮೊದಲ ದಿನ. 'ಉಡು' ಅಂದರೆ ನಕ್ಷತ್ರ, 'ಗಮನ' ಅಂದರೆ ಚಲನೆ ಈ ಎರಡು ಪದಗಳ ಮೊದಲ ಅಕ್ಷರ ಕೂಡಿ 'ಉಗ' (ನಕ್ಷತ್ರ ಚಲನೆ) ಎಂದೂ, ಇದಕ್ಕೆ

ಆರಂಭಕಾಲಸೂಚಕ 'ಆದಿ' ಸೇರಿ 'ಉಗಾದಿ' ಎಂದೂ ಆಗಿದೆ. ಯುಗದ ಆದಿ 'ಯುಗಾದಿ' ಎಂಬ ಸಂಸ್ಕೃತ ಪದದ ತದ್ಭವವೇ ಉಗಾದಿ ಎಂದು ಹೇಳುವದುಂಟು. ಜನಸಾಮಾನ್ಯರ ನಾಲಿಗೆಗೆ 'ಉಗಾದಿ' ಹೆಚ್ಚು ಹತ್ತಿರದ ಪದವಾಗಿದೆ. ಶಾಲಿವಾಹನ ಶಕೆ ಆರಂಭವಾಗುವುದು ಇಂದಿನಿಂದ. ದೊರೆ ಶಾಲಿವಾಹನನು ಉಜ್ಜಯಿನಿಯ ವಿಕ್ರಮಾದಿತ್ಯನನ್ನು ಪರಾಭವಗೊಳಿಸಿ ತನ್ನ ಮಹಾ ವಿಜಯದ ಕುರುಹಾಗಿ ಶಾಲಿವಾಹನ ಶಕವನ್ನು ಚೈತ್ರ ಶುದ್ಧ ಪ್ರತಿಪದೆಯಂದು ಪ್ರಾರಂಭಿಸಿದ. ವಿಜಯೋತ್ಸವದ ಪ್ರತೀಕವಾದ ಯುಗಾದಿ ಪೌರುಷ ಮತ್ತು ಪರಾಕ್ರಮಗಳ ಆರಾಧನೆಯ ಪರ್ವವಾಗಿದೆ.

ದಕ್ಷಿಣ ಭಾರತದಲ್ಲಿ ವಿಶೇಷ ಪ್ರಚಾರದಲ್ಲಿರುವ **ಯುಗಾದಿ** ಸಡಗರದ ಹಬ್ಬ. ಹೊಸ ವರ್ಷದ ಪ್ರಾರಂಭ ದಿನವಂತೂ ಸರಿಯೆ, ಜೊತೆಗೆ ಇದಕ್ಕೆ ಕಲ್ಪಾಂತರದ ಚರಿತ್ರೆಯು ಹಿನ್ನೆಲೆ ಇದೆ. ಕಲಿಯುಗ ಮೊದಲಾದುದು ಇಂದಿನಿಂದ ಎಂದು ಜೋತಿಷ್ಯ ಶಾಸ್ತ್ರಜ್ಞರ ಅಭಿಮತ. ಚಾಂದ್ರಮಾನ ಸವಂತ್ಸರದ ಎಣಿಕೆಯಾಗುವುದು ಇಂದಿನಿಂದ. 'ಕಲ್ಪಾದಿ', 'ಸಂವತ್ಸರಾದಿ', 'ವರ್ಷ ಪ್ರತಿಪದೆ' ಈ ಬೇರೆ ಬೇರೆ ಹೆಸರುಗಳಿಂದ ಯುಗಾದಿ ಯನ್ನು ಕರೆಯುವುದುಂಟು. ಮಾಸಚಕ್ರದಲ್ಲಿ ಚೈತ್ರಕ್ಕೆ ಪ್ರಥಮ ಸ್ಥಾನವಷ್ಟೆ. ಶ್ರೀ ರಾಮ ನವರಾತ್ರಿ ಉತ್ಸವ ಆರಂಭವಾಗು ವುದು ಇಂದಿನಿಂದ. ಶ್ರೀ ವಿಷ್ಣುವಿನ ದಶವತಾರಗಳಲ್ಲಿ ಒಂದಾದ ಮತ್ಸ್ಯಾವತಾರ ಇಂದು ಕೈಗೂಡಿತೆಂದು ನಂಬಿಕೆ.

ಗುಜರಾತ, ಮಹಾರಾಷ್ಟ್ರ ಹಾಗೂ ಕರ್ನಾಟಕದ ಕೆಲ ಭಾಗಗಳಲ್ಲಿ 'ಪಾಡ್ಯದ ಗುಡಿ' (ಧ್ವಜ) ಕಟ್ಟುವ ವಿಶಿಷ್ಟ ಸಂಪ್ರದಾಯವೊಂದು ಪ್ರಚಲಿತವಿದೆ. ಉನ್ನತ ಆಶೋತ್ತರಗಳ ಸಂಕೇತವೆಂದು ತೋರುವ 'ಧ್ವಜ'ದ ಹಿಂದೆ ಒಂದು ಧಾರ್ಮಿಕ ಐತಿಹ್ಯ ಅಡಗಿದೆ. ಇದನ್ನು 'ಇಂದ್ರಧ್ವಜ' ಎಂದು ಕರೆಯುಲಾಗುತ್ತಿದೆ. ಪುರುವಂಶದ ವಸುರಾಜನು ಇಂದ್ರನನ್ನು ಒಲಿಸಿಕೊಂಡು. ಯುದ್ಧದಲ್ಲಿ ಜಯಗಳಿಸಿ ಕೊಡುವ ಪುಷ್ಪಹಾರವನ್ನು ಪಡೆದನಂತೆ. ವಸುರಾಜ ಈ ಪುಷ್ಪಹಾರದೊಡನೆ ತನ್ನ ನಗರ ಪ್ರವೇಶಿಸಿದ್ದು ಚೈತ್ರಶುದ್ಧ ಪ್ರತಿಪದೆಯಂದು, ಇಂದ್ರನ ಗೌರವಾರ್ಥ ವಸುರಾಜ ನಗರಿಯಲ್ಲಿ ಅಂದು ನಡೆದ ಉತ್ಸವ, ಇಂದು 'ಇಂದ್ರಧ್ವಜ'ದ ಪೂಜೆಯಲ್ಲಿ ಉಳಿದುಕೊಂಡಿದೆ. 'ಧರ್ಮಸಿಂಧು' ತೈಲಾಭ್ಯಂಗನ. ದೇವತಾಸ್ತುತಿ, ಧ್ವಜಾರೋಹಣ. ನಿಂಬ ಕುಸುಮ ಭಕ್ಷಣ, ಪಂಚಾಂಗ ಶ್ರವಣ ಈ ಪಂಚ ಕಾರ್ಯಗಳನ್ನು ವಿದ್ಯುಕ್ತವಾಗಿ ನೆರವೇರಿಸಬೇಕೆಂದು ಆದೇಶ ನೀಡಿದೆ.

ಹಿಂದುಗಳಿಗಷ್ಟೇ ಅಲ್ಲ, ಜೈನಧರ್ಮೀಯರಿಗೂ ಯುಗಾದಿ ಮಹತ್ವದ ದಿನವಾಗಿದೆ. ಆದಿ ತೀರ್ಥಂಕರರ ಹಿರಿಯ ಮಗ ಭರತ ಚಕ್ರವರ್ತಿಯ ಭೂಮಂಡಲ ದಿಗ್ವಿಜಯ ಮಹೋತ್ಸವ ಸುದಿನವಿದು. ೧೯ನೆಯ ತೀರ್ಥಂಕರ ಮಲ್ಲಿನಾಥನು ತನ್ನ ತಾಯಿ ಪ್ರಜಾವತಿಯ ಪುಣ್ಯಗರ್ಭದಲ್ಲಿ ಮೂಡಿದ ಪವಿತ್ರ ದಿನವಿದೆಂದು ಜೈನರ ನಂಬಿಕೆ.

ಋತುರಾಜ ವಸಂತನ ಆಗಮನವನ್ನು ಸಾರುತ್ತ ಯುಗಾದಿ ಬರುವುದು. ಶಿಶಿರಋತು ಕಳೆದು ವಸಂತ ಈಗ ಕಾಲಿಕ್ಕುತ್ತಿದೆ. ಶಿಶಿರ ಗಿಡಗಂಟಿಗಳ ಎಲೆಗಳನ್ನೆಲ್ಲ ಸವರಿದೆ, ಬೋಳಾಗಿಸಿದೆ. ಈಗ ಮತ್ತೆ ಅವುಗಳಿಗೆ ಜೀವದಾನವಾಗುತ್ತಿದೆ ಯುಗಾದಿ ಹೊಸ ಭರವಸೆಯನ್ನು ಹೊತ್ತು ತರುತ್ತಿದೆ. '**ಅಂಬಿಕಾತನಯ ದತ್ತ**'ರು ಯುಗಾದಿಯ ಆಗಮನದಲ್ಲಿ ಹೊಸತನವನ್ನು ಕಾಣುತ್ತಾರೆ, ಅದನ್ನು ಆದರದಿಂದ ಬರಮಾಡಿ ಕೊಳ್ಳುತ್ತಾರೆ.

ಯುಗ ಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ,
ಹೊಸ ವರುಷಕೆ ಹೊಸ ಹರುಷವ
ಹೊಸತು ಹೊಸತು ತರುತಿದೆ.

ಸೃಷ್ಟಿ ಪ್ರತಿ ವಸಂತದಲ್ಲಿ ಪುನರ್ಜನ್ಮ ಹೊಂದುವುದರ ಹಿನ್ನೆಲೆಯಲ್ಲಿ. 'ನಿದ್ದೆಗೊಮ್ಮೆ ನಿತ್ಯ ಮರಣ, ಎದ್ದ ಸಲ ನವೀನ ಜನನ' ಪಡೆಯಲಾಗದ ನಮ್ಮ ಅಸಹಾಯಕತೆಗೆ ಕವಿ ಮರುಗುತ್ತಾನೆ.

ಒಂದೆ ಒಂದು ಜನ್ಮದಲ್ಲಿ ಒಂದೆ ಬಾಲ್ಯ
ಒಂದೆ ಹರೆಯ, ನಮಗದಷ್ಟೆ ಏತಕೆ?

('ಯುಗಾದಿ'–ಗರಿ)

–ಎಂದು ಕವಿ ಕೆಣಕಿ ಕೇಳುವನು, ಹೊಸ ವರ್ಷಕ್ಕೆ ಹೊಸ ಹರುಷವನ್ನು ಹೊಸ ಹೊಸದಾಗಿ ತರುತ್ತಿರುವ ಯುಗಾದಿ, 'ನಮ್ಮನಷ್ಟೆ ಮರೆತಿದೆ' ಎಂಬಲ್ಲಿಯ ವಿಡಂಬನೆ ಹರಿತವಾಗಿದೆ.

ಯುಗಾದಿ ಬೇವು-ಬೆಲ್ಲದೊಡನೆ ಸಮರಸ ಹೊಂದಿದ ಹಬ್ಬ. ಬೇವನ್ನು ನಮ್ಮ ಹಿರಿಯರು ಲಕ್ಷ್ಮೀ ಸ್ವರೂಪ ಎಂದು ಭಾವಿಸಿದ್ದಾರೆ. ಬೇವನ್ನು ಅಶ್ವತ್ಥ ವೃಕ್ಷದೊಡನೆ ಬೆಳೆಸಿ, ಅವುಗಳ ಸಹಜೀವನದಲ್ಲಿ ಲಕ್ಷ್ಮೀ-ನಾರಾಯಣ ಸಮಾಗಮ ಕಲ್ಪಿಸಲಾಗುತ್ತಿದೆ. 'ಭವಿಷ್ಯ ಪುರಾಣ'ದಲ್ಲಿ ಯುಗಾದಿಯಂದು ಬೇವಿನ ಚಿಗುರನ್ನು ತಿನ್ನಬೇಕೆಂದು ವಿಧಿಸಿದೆ. ಸಮುದ್ರ ಮಥನದ ಕಾಲದಲ್ಲಿ ಹುಟ್ಟಿದ ಹಾಲಾಹಲದ ಒಂದು ಭಾಗವನ್ನು ಶಿವನು ಸೇವಿಸಿದನೆಂದೂ ಇನ್ನೊಂದು ಭಾಗ ಬೇವಿನ ಮರದಲ್ಲಿ ಸೇರಿಕೊಂಡಿತೆಂದೂ ಶೈವ ಪಂಥದ ನಂಬಿಕೆ. ಇಂದು ಬೇವು ತಿನ್ನುವುದು ಅಮೃತತ್ವದ ಸಂಕೇತವೆಂದು ಶೈವ ಮತೀಯರ ಭಾವನೆ. ಇಂದಿನ ಬೆಳಗು ನೀರಿನ ಪಾತ್ರೆಯಲ್ಲಿ ಬೇವಿನ ಎಲೆ, ಹೂಗಳನ್ನಿಟ್ಟು ಕಾಯಿಸಿ, ಆ ನೀರಿನಿಂದ ಮೀಯುವರು. ಪೂರ್ವಯುಗದ ಬೇವಿನ ವಿಷಪಾನದಿಂದ ಆಯುರಾರೋಗ್ಯ ಅಭಿವೃದ್ಧಿಯಾಗುವುದೆಂದು ವಿಶ್ವಾಸ. ಕಾಲಾನುಕ್ರಮದಲ್ಲಿ ಬೇವಿನೊಡನೆ ಬೆಲ್ಲ ಬೆರೆಸಿ ತಿನ್ನುವ ರೂಢಿ ಪ್ರಾರಂಭವಾಗಿರಬೇಕು. ಬಾಳಿನಲ್ಲಿ ಸುಖ-ದುಃಖಗಳನ್ನು ಸಮಾನವಾಗಿ ಸ್ವೀಕರಿಸಬೇಕೆಂಬುದರ ಸಂಕೇತವಿದು. ಬೇವಿನ ಕಹಿಯನ್ನು ಕಡಿಮೆ ಮಾಡಲೆಂಬಂತೆ ಮೃಷ್ಟಾನ್ನ ಭೋಜನ ಯುಗಾದಿಯ ವಿಶೇಷ. 'ಉಂಡದ್ದು ಉಗಾದಿ, ಮಿಂದದ್ದು ದೀಪಾವಳಿ' ಎನ್ನುವಷ್ಟು ಮಟ್ಟಿಗೆ ಖ್ಯಾತಿ ಈ ಹಬ್ಬದ್ದು.

'ಕುವೆಂಪು' ಯುಗಾದಿಯು ಸನಾತನ ರೂಢಿಯಲ್ಲಿ ಬದುಕಿನ ನಿತ್ಯ ಸಿದ್ಧಾಂತ ಗುರುತಿಸುವರು. 'ಪ್ರೇಮಕ್ಕೆ ಮೀಸಲು

ನವ ಸಂವತ್ಸರ' ಎಂದು ಹಾಡಿದ ಅವರು, ಬಾಳಿನ ಹಳೆಯ ಪರೆಯನ್ನು ಕಳಚಿ ಒಗೆಯಲು ಕರೆ ನೀಡುವರು. ಗತ ವರ್ಷದ ಮೃತ ಪಾಪ ಸುಟ್ಟು, ನವ ಸಂವತ್ಸರವನ್ನು ತೆರೆದ ಹೃದಯದೊಡನೆ ಬರಮಾಡಿಕೊಳ್ಳಬೇಕಷ್ಟೆ. ಹಿಂದಿನ ಅಪಜಯ, ಅಪಮಾನಗಳನ್ನು ಈಗ ಮರೆಯಬೇಕು. ಜೊತೆಗೆ, ಸಂಶಯ, ದ್ವೇಷ, ಅಸೂಯೆಗಳನ್ನು ಅವುಗಳ ಹುಟ್ಟಿನಲ್ಲಿಯೆ ಹತ್ತಿಕ್ಕಬೇಕು. 'ತೊಲಗಲಿ ದುಃಖ, ತೊಲಗಲಿ ಮತ್ಸರ' ಅಂದಾಗ ಈ ಸಂವತ್ಸರ ಪ್ರೇಮಕ್ಕೆ ಮೀಸಲೆಂಬುದು ಸಾರ್ಥಕ ಉಕ್ತಿ ಆಗುತ್ತಿದೆ. ಕವಿ ಕನವರಿಸುವನು-

ಮಾವಿನ ಬೇವಿನ ತೋರಣ ಕಟ್ಟು
ಬೇವು ಬೆಲ್ಲಗಳನೊಟ್ಟಿಗೆ ಕುಟ್ಟು!
ಜೀವನವೆಲ್ಲಾ ಬೇವು ಬೆಲ್ಲ,
ಎರಡೂ ಸವಿವನೆ ಕಲಿ ಮಲ್ಲ!

('ಯುಗಾದಿ'—ಪಕ್ಷಿಕಾಶಿ)

ಶ್ರೀ ಚೆನ್ನವೀರ ಕಣವಿ ಅವರು ಈ ಅನಾದಿ ವೃದ್ಧ ಪುರುಷನಿಗೆ ಮಾತಿನ ಲತ್ತೆ ಕೊಟ್ಟು, ಅವನನ್ನು ಎದುರುಗೊಳ್ಳುವರು. ಕವಿ ಯುಗಾದಿಗೆ ಬೇವು-ಬೆಲ್ಲವನ್ನೆ ನೀಡಲು ಮುಂದಾಗಿರುವುದು ಮಾರ್ಮಿಕವಾಗಿದೆ.

ಕರೆಯದಿದ್ದರೂ ನಾವು, ನೀನು ಬಂದೇ ಬರುವಿ
ಅಲ್ಲವೆ ? ಬಾ ಮತ್ತೆ, ಬಾ ಯುಗಾದಿ,
ಎಂಥ ಬಿಸಿಲೊಳು ಬಂದೆ!
ಬೇಕೆ ಬಾಯಾರಿಕೆಗೆ ಬೇವು-ಬೆಲ್ಲ?

ವರುಷ ವರುಷಕ್ಕೊಮ್ಮೆ ಬಯಲಟ್ಟದಲ್ಲಿ
ತೊಟ್ಟು ಬರುವೆ ಭರ್ಜರಿ ವೇಷ
ಓ ಚೈತ್ರ ಪುರುಷ!
ಬಿರುಗಾಳಿ, ಕೋಲ್ಮಿಂಚು, ಆಣೆಕಲ್ಲಿನ ಮಳೆಯು,
ಗುಡುಗು-ಸಂತೋಷ;
ಹೇಗಿಹುದು ಪಂಚಾಂಗದಲಿ ಹೊಸ ವರುಷ?

....

ನೆನೆಸಿದೊಡನೆಯೆ ಕನಸಿನಲ್ಲಿ ಬಂದವ ನೀನು
ಬಾ ಯುಗಾದಿ; 'ಶತಂ ಜೀವೇಮ ಶರದ'

....

ನೀ ಬರುವ ಮುನ್ನವೇ ನಡೆದಿತ್ತು ನೀ ಬರುವ
ದಾರಿಯ ರಿಪೇರಿ,
ಮುಂದೆ ಬರುವಾಗಲೆಲ್ಲ ಬಲು ಹುಷಾರಿ!
ಮರೆಯದಿರು, ಕನಿಷ್ಟ ವರುಷಕ್ಕೊಂದಾದರೂ
ಬೇಕು ನಮಗೆ ಹೊಸ ಮಾದರಿ.

ಋತು ಚಕ್ರದಲ್ಲಿ ಸೃಷ್ಟಿ ಈಗ ಹೊಸ ಬೆಡಗು ತೊಟ್ಟು ನಿಲ್ಲುವುದು. ಎಂಥ ಬಡಕಲು ಗಿಡವೂ ಈಗ ಚೆಲವು ತುಂಬಿ ಕಂಗೊಳಿಸುವುದು. ಎಲ್ಲೆಡೆ ನೂರು ವರ್ಣದ ಚಿಲುಮೆ ಚಿಮ್ಮಿರುವುದನ್ನು ಕವಿ ಕಣ್ಣು ಕಾಣುತ್ತವೆ, 'ನೂರು ತರುವಿನತಳಿರ ಕೈಯಲಿ ನೂರು ಹೂವಿನ ದೀಪವು.' **ಡಾ॥ ಜಿ. ಎಸ್ ಶಿವರುದ್ರಪ್ಪ** ಅವರು ಈ ಪರಿವರ್ತನೆಯನ್ನು ಕಣ್ಣು ಕಟ್ಟುವಂತೆ ಚಿತ್ರಿಸಿರುವರು.

ಹೂವ ಬಿಟ್ಟವೆ. ಹೂವ ತೊಟ್ಟವೆ, ಹೂವನಟ್ಟವೆ
ಮರಗಳು!
ಚೈತ್ರ ಜಾತ್ರೆಗೆ ಬಂದು ನಿಂತವೊ ನೂರು ಚೆಲುವಿನ
ರಥಗಳು.
ಕಾಮರತಿಯರು ಬಂದು ಆಡುವ ರಾಸಲೀಲಾ
ಪದಗಳು
ಸೃಷ್ಟಿ ಬರೆಯುವ ಚೈತ್ರ ಕಾವ್ಯದ ಮಧು
ಪವಾಡದ ಕಥೆಗಳು,

('ಚೈತ್ರ'–ದೇವಶಿಲ್ಪ)

ಹೊಸ ವರ್ಷ ಬಂದರೂ ಹಳೆಯದರ ಇನ್ನೊಂದು ಅವತಾರ ಆಗಿ ಬರುತ್ತಿದೆ–ಎಂದು ಶ್ರೀ ಅರವಿಂದ ನಾಡಕರ್ಣಿ ಅವರು ಕೊರಗು, ಜನತೆಯ ಆಶೆ–ಆಕಾಂಕ್ಷೆಗಳು ಇಡಿಯಾಗಿ ಕೈಗೂಡುವುದು ಮೃಗ ಮರೀಚಿಕೆ ಎಂದು ಕವಿಗೆ ಅನಿಸುವುದು. ಕಾಲಚಕ್ರ ಉರುಳಿದರೂ ಮನುಕಾಲದ ಜಟಿಲ ಸಮಸ್ಯೆಗಳಿಗೆ ಪರಿಹಾರ ಇಲ್ಲೆಂಬ ಅನಿಸಿಕೆ ಇಲ್ಲಿದೆ–

ನೋಡುವೆಯಾ ಹೊಸ ಅತಿಥಿಯನ್ನು
ಹೊಸ ಚಣ್ಣ ಅದೇ ಮೈ, ಹೊಸ ಚಾಳೀಸು
ಅವೇ ಕಣ್ಣು.

....

ಕೂಗಿತ್ತು ಜಾವದ ಕೋಳಿ ಹೊಸ ವರುಷ
ಬಂತೆಂದು.

ಕೂಗಿತ್ತು ಜೀವದ ಕೋಗಿಲೆ ಹಳೆ ವರುಷ
ಹೋಯ್ತೆಂದು;
ರೇಗಿತ್ತು ಕಾಲ ಜನದಾಕಾಂಕ್ಷೆಗಳ ಗಿರಿ ಕಂಡು
ಬಾಗಿತ್ತು ಉದ್ಯಾನದ ಗಿಡ ಶಿಶಿರದಿಬ್ಬನಿಯಲಿ
ನಡುಕಗೊಂಡು.

('ಹೊಸ ವರುಷ'—ಕಾವ್ಯಾರ್ಪಣ)

ಗ್ರಾಮೀಣ ಭಾರತದಲ್ಲಿ ಯುಗಾದಿ ತುಂಬ ಸಂಭ್ರಮದ ಹಬ್ಬ, ಬಾಳಿನ ಏರಿಳಿವುಗಳಲ್ಲಿ ಬೇವು-ಬೆಲ್ಲದಂಥ ಸಾಮರಸ್ಯ ಸಾಧಿಸಲು, ಕಷ್ಟ ಪರಂಪರೆಗಳಲ್ಲಿ ಕೆಚ್ಚುನೆಚ್ಚನ್ನು ಮೈಗೂಡಿಸಿ ಕೊಳ್ಳಲು, ಚೈತನ್ಯದಾಯಕ ಯುಗಾದಿಯನ್ನು ಗ್ರಾಮಗ್ರಾಮ ಗಳಲ್ಲಿ ವೈಭವದಿಂದ ಆಚರಿಸುವರು. ರೈತನ ಮನೆಯಲ್ಲಿ ಇಂದು ಎಲ್ಲವೂ ಹೊಸತು, ಎತ್ತಿಗೆ ಹೊಸ ಬಾಸಿಂಗ, ಹಣೆಕಟ್ಟು, ಸರು-ಹಗ್ಗಗಳ ಸಿಂಗಾರ. ರೈತರು ಇಂದು ತಮ್ಮ ಎತ್ತುಗಳನ್ನು ಸಿಂಗರಿಸಿ ಮೆರೆಸುವರು. ಭೂಮಿಯನ್ನು ಉಳುವುದಕ್ಕೆ ಇಂದೇ ಸುಮುಹೂರ್ತ, ಮುಹದಾರ್ತ ಮಾಡುವ ಈ ಕ್ರಿಯೆಗೆ 'ಮಜಲು' ಅನ್ನುವರು. ಮಲೆನಾಡಿನಲ್ಲಿ ಈಗ ಹೊಸ ಮಳೆ ಗಳು ಕೂಡಿ ರೈತನ ಹರುಷ ಹೆಚ್ಚಿಸುವವು. ಗ್ರಾಮ ಸಮೂಹ ಗಳಲ್ಲಿ ಈಗ ಹಲವು ವಿವಿಧ ಶಕ್ತಿ ಪ್ರದರ್ಶನಗಳು ಏರ್ಪಡು ವವು. ಎತ್ತುಗಳಿಂದ ಧಾನ್ಯ ತುಂಬಿದ ಚಕ್ಕಡಿ ಎಳೆಸುವುದು ಹಾಗೂ ಪೈಲವಾನರ ಕುಸ್ತಿ-ಕಸರತ್ತುಗಳ ಪಂದ್ಯಾಟ ಇವುಗಳಲ್ಲಿ ಮುಖ್ಯವಾಗಿರುವವು.

ಬೆಳವಲದ ಬಯಲುಗಳಲ್ಲಿ ಈಗ ಮಲ್ಲಯ್ಯನ ಉತ್ಸವ ನಡೆಯುವುದು. 'ಮಲ್ಲಯ್ಯನಿರುವುದು ಮರದ ಮಂಜಣದಾಗ.' ಶಿವೋಪಾಸನೆಯ ಒಂದು ವಿಧಾನ ಇದಾಗಿದ್ದು, ಶಿವ ಪರಿವಾರದ ನಂದಿ(ಬಸವ) ಈಗ ವಿಶೇಷ ಪೂಜೆ ಪಡೆಯುವನು. ಬಸವಸ್ತುತಿ ಜನಪದ ಗೀತಗಳಲ್ಲಿ ಹೊನಲಾಗಿ ಹರಿದಿದೆ—

ಬಸವಣ್ಣ ಹುಟ್ಟ್ಯಾಲಿ ಹೊಸ ಕೆರೆ ಕಟ್ಟ್ಯಾಲಿ
ರಸದಾಳೆ ಕಬ್ಬು ಬೆಳೆಯಾಲಿ । ಮಲ್ಲನ ಮೂಲೆ
ಬಸವಣ್ಣನ ತೇರು ಹರಿಯಾಲಿ ॥

ಬಸವಣ್ಣ ನಿನ್ಹೆಸರು ದೆಸೆ ದೆಸೆಗೆ ಶಿವಮಂತ್ರ
ಹೊಸ ಮತಕೆ ಮಂತ್ರ ನಿತ್ಯದಲಿ । ಒಕ್ಕಲಿಗ
ಹೊಸ ಮಂತ್ರ ಬಸವ ಜಪಿಸುವನು ॥

ಉತ್ತು ಬಿತ್ತುವ ಮಂತ್ರ ಬಿತ್ತಿ ಬೆಳೆಯುವ ಮಂತ್ರ
ಸತ್ಯ ಶಿವ ಮಂತ್ರ ನಿನ್ಹೆಸರು । ಬಸವಯ್ಯ
ಮರ್ತ್ಯದೊಳು ಮಂತ್ರ ಜೀವನಕೆ ॥

ಇಂದು ಅಂಬಲಿಯ ದಾನ ನೀಡುವ ರೂಢಿ ಬೆಳವಲದಲ್ಲಿದೆ. ಅನ್ನದಾನಕ್ಕಿಂತ ಇನ್ನುದಾನ ಇಲ್ಲವಷ್ಟೆ.

ಅಂಬಲಿಯ ನೀಡುತಲಿ, ಎಂಬಲವ ಹಾಕುತಲಿ
ಕಂಬಿಗಳ ಹೊತ್ತು ಮೆರೆಸುತಲಿ । ಹೊಸ ದಿನಕೆ
ಶಂಭು ಹರನೆಂದು ಬೆಳವಲವು ॥

ಜಾನಪದ ಗೀತಗಳು ಹಳ್ಳಿಗರ ಇಂದಿನ ಸಂಭ್ರಮವನ್ನು ತದ್ರೂಪ ಚಿತ್ರಿಸುವವು—

ಗುಡಿಯು ತೋರಣ ಕಟ್ಟಿ ಸಡಗರವು ಹೊಸದಿನವು
ಉಡುಗರೆಯು ನಾಡು ಬೆಳವಲವು। ಹೊಸತನವ
ಎಡೆ ಮಾಡಿ ಉಂಡು ಶಿವನೆಂದು ॥
ಹೊಸದಿನಕೆ ಹೊಸತರ್ನವು, ಹೊಸತನವು, ಹೊಸ
ಎರಳೆಯು ಹೊಸ ಬೆಳೆಯು
ಹೊಸ ದೀಪ ಹಚ್ಚಿ ಬೆಳವಲವು। ಎಳೆಯುವದು
ಬಸವಣ್ಣ ನಿಮ್ಮ ಹೊಸ ತೇರು ॥

(ಕನ್ನಡ ಜಾನಪದ ಗೀತಗಳು ಸಂ ಡಾ. ಗದ್ದಗಿವ,ಠ)

ಶ್ರೀ ಗೋಪಾಲ ಕೃಷ್ಣ ಅಡಿಗರ 'ಯುಗಾದಿ' ಕವನದಲ್ಲಿ ಶ್ರಮಜೀವಿಗಳ ಸಾರ್ಥಕ ಕಾಯಕದ ಕಲ್ಪನೆ ರಮ್ಯವಾಗಿ ಅರಳಿದೆ, ಹೊಸ ನಾಡನ್ನು ಕಟ್ಟಲು ತರುಣರನ್ನು ಆಹ್ವಾನಿಸಿದ ಕವಿ, ಸಲ್ಲದ ಕುಚೇಷ್ಟೆಗಳಿಗೆ ಸಮಯವಿದಲ್ಲ ಎಂದು ಎಚ್ಚರಿಸುವನು. 'ಬೇಡವೊ ಗಲಾಟೆ, ಇನ್ನೂ ಇದೆ ಬೇಕಷ್ಟು ಹೊರಲು ಮೂಟೆ!'

ಮಾಗಿ ತಲೆ ಮುಟ್ಟಿ ಬಂತು ಯುಗಾದಿ; ಹಿಡಿಹಾದಿ,
ರಸ್ತೆ ಧೂಳಿಗೆ ನಿನ್ನ ಬೆವರ ಜಳಕ,
ಆಮೋದಕೀಗ ಪೂರ್ಣ ವಿರಾಮ.
....
ಹೊತ್ತು ಹುಟ್ಟುವ ಮೊದಲೆ ಕಟ್ಟು ಸೊಂಟವ,
ಕೊರಳ
ಗಂಟೆ ಗಣಗಣ ಮೊಳಗುವೆತ್ತು, ನೊಗ ನೇಗಿಲು
ಹೊತ್ತು ನಡೆ ಗದ್ದೆಗೆ

('ಯುಗಾದಿ'–ಅಡಿಗರ ಆಯ್ದ ಕವನಗಳು)

ಶ್ರೀ ಅಡಿಗರ ಇದೇ ಹೆಸರಿನ ಇನ್ನೊಂದು ಕವನದಲ್ಲಿ, ಯುಗಾದಿ ಬಂದರೂ ಹೋದರೂ ಜನಜೀವನ ಯಥಾಪ್ರಕಾರ ಕೊಳಚೆಯಲ್ಲಿ ಕುಪ್ಪಳಿಸುತ್ತ ಬಿದ್ದಿದೆ ಎಂಬ ನಿರಾಶೆ ಹೆಪ್ಪು ಗಟ್ಟಿದೆ—

ಯುಗಯುಗಾದಿಯ ತೆರೆಗಳೇಳುತಿವೆ, ಬೀಳುತಿವೆ
ಹೊಸ ಹೊಸವು ಪ್ರತಿ ವರುಷವು;
ಒಳಗೆ ಅದೊ ಕಾಣುತಿದೆ ಚೆಲುವಿರದ ನಲುವಿರದ
ಕೊಳೆಯ ಬೆಳೆ-ರಂಗ ಮಂದಿರವು!

('ಯುಗಾದಿ'– ಅಡಿಗರ ಆಯ್ದ ಕವನಗಳು)

ಕಾಲಚಕ್ರ ಉರುಳುತ್ತಿದೆ, ಮನುಷ್ಯರ ಮಧ್ಯದ ಆತ್ಮೀಯ ಸಂಬಂಧದ ಎಳೆಗಳು ಇಂದು ಹಿಂದಿನಷ್ಟು ಗಟ್ಟಿಯಾಗಿಲ್ಲ. ಪರಿಸರದಲ್ಲಿ ಅಸುರಕ್ಷಿತತೆಯ ವಾತಾವರಣ ಕವಿದಿದೆ. ಮನಗಳ ಮಧ್ಯೆ ಅಭೇದ್ಯ ಗೋಡೆಗಳೆದ್ದಿವೆ, ಸ್ವಾರ್ಥ ರಾಕ್ಷಸ ತಾಳ ತಪ್ಪಿ ಕುಣಿಯುತ್ತಿದ್ದಾನೆ. **ಶ್ರೀ ಚೆನ್ನವೀರ ಕಣವಿ** ಅವರ 'ಯುಗ ಯುಗದ ಹಾಡು' ಮನುಷ್ಯನ ವಿಫಲತೆಯ ಕಥೆಯಾಗಿದೆ. ಮಹಾಪುರುಷರನ್ನು ಪೂಜಿಸಿ ಕೈತೊಳೆದುಕೊಳ್ಳುವ ನಾವು, ಅವರ ಪ್ರಭಾವಲಯದಿಂದ ಹೊರಗೆ ನಿಂತಿರುವೆವು. ಹಗಲಿರುಳೆನ್ನದೆ ನಾಟಕದ ವೇಷ ಧರಿಸಿ, ನಟಿಸಿ ಆಗಿದೆ—

ನಿನಗೆ ಬೇವು, ನನಗೆ ಬೆಲ್ಲ
ನವ ಯುಗಾದಿ ಗಾದೆಯು;
ಕೂಡಿ, ಕುಟ್ಟಿ ಸವಿಯಲಿಲ್ಲ,
ಯುಗ ಯುಗಗಳ ಹಾಡಿದು.

('ಯುಗ ಯುಗದ ಹಾಡಿದು'–ನೆಲ ಮುಗಿಲು)

ಕವಿ ಅಸಹಾಯಕತೆಯ ಸಡುವೆಯೂ ಸಮಾಧಾನದ ನಿಟ್ಟುಸಿರಿಡುವನು. ಶುಭಾಶುಭದ ಫಲಗಳೇನೆ ಇರಲಿ, ಯುಗಾದಿಯನ್ನು ನಾವು ಎದುರುಗೊಳ್ಳಬೇಕಷ್ಟೆ. 'ಇಳುಹಿ ಕೊಳ್ಳಿ ತಲೆಯ ಭಾರ, ಲಾಭ ಹಾನಿ ಮುಂದಿದೆ'.

ವೈಭವದ ವಾಕರಿಕೆಯನ್ನು ಹೊತ್ತು ಬರುವ ಯುಗಾದಿ, ತನ್ನ ಗರ್ಭದಲ್ಲಿ ಹಾಳು ತಿಪ್ಪೆಯ ಕೆಸರನ್ನು ಹೊಂದಿದೆ–ಎಂದು **ಡಾ|| ಸೋಮಶೇಖರ ಇಮ್ರಾಪೂರ** ಅವರು ಭಾವಿಸುತ್ತಾರೆ. ಹಳೆಯ ರಗಳೆಯನ್ನೆ ಇದು ಮತ್ತೆ ಮತ್ತೆ ತರುತ್ತಿದೆ ಯೆಂದು ಕವಿಗೆ ಬೇಸರ–

ಬೇರೊಬ್ಬರ ಹನ್ನೆರಡೂ ತಿಂಗಳ ಡುಬ್ಬ ಚಪ್ಪರಿಸಿ
ಪಕ್ಕಡಿ ಎಲುವುಗಳ
ತಿಂದು
ಧಿತ್ತೆಂದು ಬಂತು ಮತ್ತೆ
ಅದೇ; ಯುಗಾದಿ!
ಹಾಕು, ತಿಪ್ಪೆ ಕೆಸರಿನ ಮೇಲೆ
ಗಂಧದೆಣ್ಣೆ!
....
ಹೊರಗೆ ಎಲ್ಲೆಲ್ಲೂ, ವೈಭವದ ವಾಕರಿಕೆ,
ಸದ್ದಿಲ್ಲದೆ ಗುದ್ದಿ ನಿಂತಿದೆ ಸುದಿನ.

('ಯುಗಾದಿ'—ಬೆಂಕಿ)

ಹೊಸ ವರ್ಷದ ಮೊದಲ ದಿನ ಯುಗಾದಿ ನಾವು ಹೊಸ ಬಯಕೆಗಳನ್ನು ಹೊತ್ತು ನಿಲ್ಲಬೇಕೆಂದು ಹಂಬಲಿಸುತ್ತಿದೆ.

ಇಂದು ಪ್ರಾಪ್ತ ಸುಖ–ದುಃಖ ವರ್ಷದ ಉದ್ದಕ್ಕೂ ಜೊತೆಯಾಗಿ ನಡೆಯುವವೆಂದು ನಂಬಿಕೆ. ನಮ್ಮ ಬದುಕಿನ ಭಾಗ್ಯ ನಿರ್ಣಯಿಸುವವರು ನಾವೇ ಎಂಬ ಆತ್ಮ ವಿಶ್ವಾಸ ನಮ್ಮಲ್ಲಿ ಹುಟ್ಟಬೇಕು. ಸಾಹಸ, ಪ್ರಯತ್ನಶೀಲತೆ ಹಾಗೂ ಪ್ರಾಮಾಣಿಕತನಗಳನ್ನು ವ್ಯಕ್ತಿಗಳು ತಮ್ಮದಾಗಿಸಿಕೊಂಡಾಗ ಬದುಕು ಬಂಗಾರವಾಗುವುದು. **ಶ್ರೀ ಕೆ. ಎಸ್. ನರಸಿಂಹಸ್ವಾಮಿ** ಅವರು ಹಾಡಿರುವಂತೆ,

> **ಮಾವು ನಾವು, ಬೇವು ನಾವು**
> **ನೋವು ನಲಿವು ನಮ್ಮವು**
> **ಹೂವು ನಾವು, ಹಸಿರು ನಾವು**
> **ಬೇವು ಬೆಲ್ಲ ನಮ್ಮವು!**

('ಯುಗಾದಿ'—ಶಿಲಾಲತೆ)

ಹೊಸ ವರ್ಷದ ಕೆಚ್ಚಿಗೆ ಅನುಗುಣವಾಗಿ ವ್ಯಕ್ತಿಗಳು ತಮ್ಮ ಬದುಕನ್ನು ರೂಪಿಸಿಕೊಳ್ಳಬೇಕು–ಎಂದು ಕವಿ ಬಯಸುವನು. **'ಹೊಸತು ಬಯಕೆ ನಮ್ಮವು,'** ಯುಗಾದಿ ಹಬ್ಬಗಳೆಲ್ಲ ಹರುಷದ ದಿಬ್ಬವಾಗಿ, ಉತ್ಸಾಹದ ದಿನವಾಗಿ, ಸ್ಫೂರ್ತಿಯ ಸೆಲೆಯಾಗಿ ವರ್ಷಗಳಿಂದ ನಿಂತಿದೆ. ಹಾಗೆಯೆ ಅದು ಇಂದೂ ಹಾಗೂ ಮುಂದೆಯೂ ನಿಲ್ಲಬೇಕೆಂದು ನಮ್ಮ ಕವಿಗಳ ಬಯಕೆ. ಋತು ಚಕ್ರದ ಮುನ್ನಡೆಯಲ್ಲಿ ಬದುಕು ಹೊಸ ತಿರುವನ್ನು ಪಡೆಯಬೇಕು. 'ತಿರು ತಿರುಗಿಯು ಹೊಸತಾಗಿರಿ ಎನುತಿದೆ ಋತುಗಾನ. ಈ ಹಾಡಿಗೆ ಶ್ರುತಿ ಹಿಡಿದಿದೆ ಬ್ರಹ್ಮಾಂಡದ ಮೌನ' ('ಅಂಬಿಕಾತನಯ ದತ್ತ'),

ಶ್ರೀ ಕೆ. ಎಸ್. ಎನ್. ಅವರ ಹಾರೈಕೆಯಲ್ಲಿ ನಾವೂ ಧ್ವನಿ ಗೂಡಿಸೋಣ—

ಹೆಜ್ಜೆಗೊಂದು ಹೊಸ ಯುಗಾದಿ
ಚೆಲುವು ನಮ್ಮ ಜೀವನ!
ನಮ್ಮ ಹಾದಿಯೇ ಅನಾದಿ
ಪಯಣವೆಲ್ಲ ಪಾವನ!

('ಯುಗಾದಿ'—ಶೀಲಾಲತೆ)

೩. ವಿಜಯ ದಶಮಿ

ಆಶ್ವಿನ ತಿಂಗಳ ನವರಾತ್ರಿ ಕನ್ನಡಿಗರ ಪಾಲಿಗೆ ನಾಡಹಬ್ಬ ವಾಗಿದೆ. ವಿಜಯ ನಗರ ಅರಸರ ಕಾಲದಿಂದ ಪ್ರಾರಂಭವಾದ ಈ ಪರಂಪರೆ ಮೈಸೂರು ಒಡೆಯರ ಕಾಲದವರೆಗೆ ರಾಜಾಶ್ರಯ ದಲ್ಲಿ ನಡೆಯಿತು. ಅನಂತರದ ದಿನಗಳಲ್ಲಿ ಸಾರ್ವಜನಿಕರು ಜಾಗೃತರಾಗಿ ಈ ಉತ್ಸವವನ್ನು ಕೈಗೆತ್ತಿಕೊಂಡಿರುವರು. ನಾಡ ಹಬ್ಬದ ಆಚರಣೆಯ ಅಂಗವಾಗಿ ಕರ್ನಾಟಕದ ಹಲವಾರು ನಗರಗಳಲ್ಲಿ, ಹಳ್ಳಿಗಳಲ್ಲಿ ನಾನಾ ವಿಧದ ಸಾಂಸ್ಕೃತಿಕ ಕಾರ್ಯ ಕ್ರಮಗಳು ಪ್ರತಿವರ್ಷ ನಡೆಯುತ್ತಿವೆ. ವಿಜಯ ನಗರ ಅರಸರ ಕಾಲದಲ್ಲಿ ವಿಜಯ ದಶಮಿ ಹಬ್ಬ ವೈಭವದ ಆಚರಣೆ ಹೊಂದಿತ್ತು. ಇಂದಿನ ಬರಡು 'ಮಾನೋಮಿ ದಿಬ್ಬ' ಆಗ ಜೀವಂತ ಶಕ್ತಿಯಾಗಿ ನಿಲ್ಲುತ್ತಿತ್ತು. ಪ್ರೊ॥ ವಿ. ಸೀತಾ ರಾಮಯ್ಯ ಅವರ 'ಪಂಪಾ ಯಾತ್ರೆ'ಯಲ್ಲಿಯ ಉಲ್ಲೇಖಗಳು ರೋಮಾಂಚಕಾರಿಯಾಗಿವೆ– "ಇದು ವಿಜಯ ದಶಮಿಯ

ಗಳಾಗಿವೆ. ಅಂತೆಯೆ ವಿಜಯ ದಶಮಿಯನ್ನು 'ವಿಜಯದ ಶಮಿ' ಎಂದು ಕರೆಯಲಾಗಿದೆ. ಪಾಂಡವರು ಅಜ್ಞಾತವಾಸದ ಆರಂಭದಲ್ಲಿ ತಮ್ಮ ಆಯುಧಗಳನ್ನೆಲ್ಲ, ವಿರಾಟನಗರದ ಹೊರ ವಲಯದಲ್ಲಿರುವ ಶಮೀ ವೃಕ್ಷದ ಮೇಲೆ ರಹಸ್ಯವಾಗಿ ಇಟ್ಟ ರಂತೆ. ಮುಂದೆ, ಉತ್ತರ ಗೋಗ್ರಹಣ ಕಾಲದಲ್ಲಿ ಅರ್ಜುನನು ಅಲ್ಲಿಗೆ ಬಂದು ಆ ಆಯುಧಗಳನ್ನು ತಕ್ಕೊಂಡು ಯುದ್ಧಕ್ಕೆ ಅಣಿಯಾಗುತ್ತಾನೆ.

'ಅಂಬಿಕಾತನಯ ದತ್ತ'ರು ಅಸ್ತವ್ಯಸ್ತ ಜನಜೀವನ ವನ್ನು ಸರಿಪಡಿಸಲು ವಿಜಯ ದಶಮಿ ತಕ್ಕದಿನವೆಂದು ಬಗೆ ಯುವರು. ಗುಂಪುಗಾರಿಕೆ, ಜಾತೀಯತೆ, ಪಕ್ಷಪಾತದಂತಹ ಅನಿಷ್ಟಗಳ ಸೀಮೆಯನ್ನು ದಾಟಿ ಮುನ್ನಡೆಯಲು ಕವಿ ಕರೆ ನೀಡಿರುವನು.

ಹೋಗೋಣ ಬಾ ಇನ್ನು, ಸೀಮೆಯನು ದಾಟಿ!
ಪಂಗಡವ ಪಂಗಡವ ವಿಂಗಡಿಸಿ ಕೆಟ್ಟು
ಸಂಗಡಿಸಿ ಕೂಡಿರುವ ಬಾಳುವೆಯ ಗುಟ್ಟು
ಕಂಗೊಳಿಸೆ ಹಾಗಿರುವ ಬಿರುದನ್ನು ತೊಟ್ಟು

....

ಮಾಡಿದರೆ ನನ್ನಿ ತಾ ಮಾಡುವರು ನನ್ನಿ
ನೋಡಿ ನೋಡಿದವರ್ಗ ಬನ್ನಿ ಬನ್ನೆನ್ನಿ
ಕೊಡಬನ್ನಿ ಕೊಳಬನ್ನಿ ಕೂಡುವೆನೀ ಬನ್ನಿ
ಹೀಗೆಂದು ಸಾಗೋಣ ಸೀಮೆಯನ ದಾಟಿ.

ಹಿಂದಿನ ಹಗೆ ಈಗ ಅಂಗಾರವಾಗಿ, ಹೊಸ ಗೆಳೆತನದ ನಾಂದಿ ಇಂದಾಗಬೇಕೆಂದು ಕವಿ ಮನದ ಅಪೇಕ್ಷೆ, ಅಂಧಶ್ರದ್ಧೆ, ಅನೈಕ್ಯ ಅಜ್ಞಾನಗಳ ವಿರುದ್ಧ ಒಕ್ಕಟ್ಟಿನಿಂದ ಹೋರಾಡಲು ಕವಿ ಜನತೆಯನ್ನು ಆಹ್ವಾನಿಸುವನು. ತಿರುಕುತನ ಮನೆ ಮುರುಕುತನಗಳನ್ನು ಮೆಟ್ಟಿನಿಂತು, ಬಲ್ಲವರು ತೋರಿರುವ ಹಾದಿಯಲ್ಲಿ ಮುನ್ನಡೆಯಲು ಕವಿ ಕನ್ನಡಿಗರನ್ನು ಕೇಳಿಕೊಳ್ಳು ವನು.

ಬೇಗದಿಂ ಕರುನಾಡ ಹರಕುತನವನ್ನು
ಕಳೆದು ಹಿರಿದಾಗೋಣ ಸೀಮೆಯನು ದಾಟಿ

('ಸೀಮೋಲ್ಲಂಘನ'-ಗರಿ)

ವಿಜಯ ದಶಮಿಯನ್ನು 'ದಸರೆ' ಎಂದು ಕೂಡ ಕರೆಯುವು ದುಂಟು. ಇದು ಪ್ರಾಮುಖ್ಯವಾಗಿ ತರುಣರ ಹಬ್ಬ, ತರುಣರು ರಾಷ್ಟ್ರದ ಚೇತನ, ಸೊತ್ತು ಅವರನ್ನು ರಾಷ್ಟ್ರದ ಉಪ್ಪು ಎಂದು ಬಗೆಯಲಾಗಿದ್ದು, ಉಪ್ಪು ತನ್ನ ರುಚಿಯನ್ನು ಕಳೆದುಕೊಂಡರೆ ಅದಕ್ಕೆ ರುಚಿ ಕಟ್ಟಲು ಇನ್ನೆಲ್ಲಿಂದ ಸಾಧ್ಯ? ಜನಪದ ಕವಿಯೊಬ್ಬ ಇಂದಿನ ತರುಣರ ಸಡಗರವನ್ನು ತನ್ನ ತ್ರಿಪದಿಯೊಂದರಲ್ಲಿ ರಮ್ಯವಾಗಿ ಸೆರೆಹಿಡಿದಿರುವನು.

ಕಣ್ಣು ಮೂಗಿಲೆ ನನ್ನ ಹೆಣ್ಣು ಮಗಳು ಚೆಲುವಿ
ಬಣ್ಣಕ ನನ ಸೊಸಿ ಚೆಲುವಿ । ದಸರೇಕ
ಬನ್ನಿ ಮುಡಿವಾಗ ಮಗ ಚೆಲುವ

ಡಾ॥ ದಿನಕರ ದೇಸಾಯಿ ಅವರು 'ತರುಣರ ದಸರೆ' ಕವನದಲ್ಲಿ, ಉತ್ಸಾಹದ ಕಿರುಗೆಜ್ಜೆ ಕಟ್ಟಿ ಮುನ್ನಡೆಯಲು ತರುಣರನ್ನು ಆಹ್ವಾನಿಸುವರು. ನಿರ್ಭೀತಿ, ಪ್ರಗತಿ, ಆತ್ಮ ಸಂಯಮ ನೀತಿ. ವಿವೇಕ, ಔದಾರ್ಯ-ಇವು ತರುಣರ ಸ್ವೊತ್ತಾಗಬೇಕೆಂದು ಕವಿಯ ಹಾರೈಕೆ, ಕವಿ ಕಿವಿಮಾತು ಹೇಳುವನು.

ಧರ್ಮದ ಗಡಿಯನು ದಾಟಲು ಬೇಡಿ
ಕರ್ಮದ ಕೋಲನು ಬಿಡದಲೆ ಓಡಿ
ಮರ್ಮವ ತಿಳಿದೆಲ್ಲರು ಹಾರಾಡಿ
ಚರ್ಮದ ದೇಹವ ಸಾರ್ಥಕ ಮಾಡಿ,

ಅಂಧಶ್ರದ್ಧೆಗಳು ಶತಮಾನಗಳಿಂದ ನಮ್ಮ ಜನಜೀವನವನ್ನು ಆಳುತ್ತಿವೆಯಷ್ಟೇ, ಇದರಿಂದಾಗಿ ಪ್ರಗತಿ ಪಥದಲ್ಲಿ ಹೆಜ್ಜೆ ಹಾಕಲು ನಮಗೆ ಆಗುತ್ತಿಲ್ಲ. ಅಂಧಶ್ರದ್ಧೆಗಳಿಗೆ ಬೆಂಕಿ ಹಚ್ಚಿ ತರುಣರೆಲ್ಲ ಚಪ್ಪಾಳೆ ತಟ್ಟುತ್ತ ನಿಂತ ರಮ್ಯ ದೃಶ್ಯವನ್ನು ಕವಿ ಇಲ್ಲಿ ಕಲ್ಪಿಸುವನು. ಸಾಮಾಜಿಕ ಪ್ರಜ್ಞೆ ಹಾಗೂ ಸಮತಾ ಭಾವ ತರುಣರಲ್ಲಿ ಒಡಮೂಡಬೇಕು. ಅಂದಾಗ ದಸರೆಯ ಆಚರಣೆ ಸಾರ್ಥಕ- ಎಂದು ಹಾಡುವನು-

ಅಂದು ಮೂಡುವನು ದಸರೆಯ ತರುಣ
ಅಜ್ಞಾನದ ಕತ್ತಲೆಗದು ಮರಣ
ಮಾನವ ಧರ್ಮದ ದಸರೆಯ ಮಾಡಿ
ಕನ್ನಡ ನಾಡಿನ ಹಾಡನು ಹಾಡಿ,

....

ಅಂದಿನ ದಿನವೇ ನಿಜ ದಸರೆ
ಇಂದಿನ ದಸರೆಯು ಬರಿ ಹೆಸರೆ !

('ತರುಣರ ದಸರೆ'- ಕವನ ಸಂಗ್ರಹ)

ಶ್ರೀ ಚೆನ್ನವೀರ ಕಣವಿ ಅವರ 'ಇಂದೆ ಸೀಮೋಲ್ಲಂಘನ ಕವನ' ವಿಜಯ ದಶಮಿಯ ಪರಂಪರೆಯನ್ನು ಸೂಚ್ಯವಾಗಿ ಬಳಸಿಕೊಂಡಿದೆ. ನಮ್ಮ ತಾಯಿನಾಡಿನ ಪ್ರಾದೇಶಿಕ ಸಮಗ್ರತೆ ಕಾಯ್ದುಕೊಳ್ಳಲು ಕವಿ ಇಲ್ಲಿ ಕರೆ ನೀಡಿರುವನು–

ಹಿಡಿದ ಕಾಯಕ ನಿಷ್ಠೆ ನಡತೆಗೆ
ಒಟ್ಟು ನಾಡಿನ ಒಕ್ಕಲು
ಎಲ್ಲ ಶಕ್ತಿಯ ಝರಿ ತೊರೆಗಳಾ
ಭೆಟಿಸಿ ಸಾಗರವುಕ್ಕಲು
....
ಶಿವನ ತಪಸಿಗೆ ಭಂಗ ಬಂದರು
ನವ ಕುಮಾರನ ಸಂಭವ
ತಾರಕಾಸುರ ವಧೆಯು ಕಾದಿದೆ
ಭರತಕುಲ ವಿಜಯೀ ಭವ.

('ಇಂದೆ ಸೀಮೋಲ್ಲಂಘನ'—ನೆಲ ಮುಗಿಲು)

ದಸರೆಯ ನಿಜವಾದ ಸಡಗರವನ್ನು ಇಂದಿಗೂ ನಮ್ಮ ಹಳ್ಳಿಗಳಲ್ಲಿ ಕಾಣಬಹುದು. ದಸರೆಯ ದಿನ ಹಳ್ಳಿಯ ಹಿರಿಯ (ಗೌಡ)ನು ದೊರೆಯ ಪ್ರತಿನಿಧಿಯಾಗಿ, ನಾಗರಿಕರೊಡನೆ ಬನ್ನಿ ಮುಡಿಯಲು ಗ್ರಾಮಸೀಮೆಯನ್ನು ದಾಟಿ ಹೋಗುವನು. ಅವನೇ ಮೊದಲು ಶಮೀ(ಬನ್ನಿ) ಗಿಡದ ಪೂಜೆ ನೆರವೇರಿಸುವನು. ಎಲ್ಲರೂ ದೇವರಿಗೆ ಬನ್ನಿಯ ಎಲೆಗಳನ್ನು ಅರ್ಪಿಸುವರು, ಆಮೇಲೆ ಪರಸ್ಪರರು 'ಬಂಗಾರ' ಎಂಬ ಹೆಸರಿನಿಂದ ಬನ್ನಿಯನ್ನು ಕೊಡುವರು, ತಕ್ಕೊಳ್ಳುವರು, 'ಬಂಗಾರ

ತಕ್ಕೊಂಡು ಬಂಗಾರದ್ಹಂಗ ಇರೋಣ' ಎಂಬ ಮಾತು ಇಂದು ಗಾಳಿಯಲ್ಲೆಲ್ಲ ಪ್ರತಿಧ್ವನಿಸುವುದು.

ವಿಜಯ ದಶಮಿ ನಮ್ಮ ಜನಪದ ಕವಿಗಳ ಮನವನ್ನು ಸೂರೆಗೊಂಡಿದೆ.

ನಾವು ಕುಣಿಯೋಣ ಬನ್ನಿ, ಹ್ಯಾಂವ
ಮರಿಯೋಣ ಬನ್ನಿ
ಜೀವ ಒಂದಾಗಿ ಇರ ಬನ್ನಿ ॥
ಇಂದು ಮುಡಿಯುವ ಬನ್ನಿ ಮುಂಢೆಮುಗ
ಹೊನ್ನಾಗಿ
ಕುಂದಣದಾರೂತಿ ಬೆಳಗುದಕ ॥

ಇಲ್ಲಿಯೂ ಕೂಡ ತಿಳಿವಳಿಕೆ ಹಾಗೂ ಸಾಮರಸ್ಯದ ಕವಿ ಮಾತು ಹುದುಗಿರುವುದನ್ನು ಗಮನಿಸಬೇಕು, ಬದುಕಿನ ಮಂಗಲ ಮುಖದೆಡೆಗೆ ಜನಜೀವನ ತಿರುಗಬೇಕೆಂಬ ಹಂಬಲ ಇಲ್ಲೆಲ್ಲ ಹಣ್ಣಾಗಿದೆ, ವಿಜಯ ದಶಮಿಯ ಭವ್ಯಪರಂಪರೆ ನಿಜಕ್ಕೂ ಅನುಕರಣೀಯ, ಸಮಾಜ ಜೀವನದಲ್ಲಿಯ ಅನಿಷ್ಟಗಳ ವಿರುದ್ಧ ಹೋರಾಡುವ ಕೆಚ್ಚನ್ನು ಶ್ರೀ ಸಾಮಾನ್ಯರು ತಮ್ಮ ದಾಗಿಸಿಕೊಳ್ಳಬೇಕು. ಈ ಶಕ್ತಿ ವಿಘಾತಕ ಕಾರ್ಯಗಳಲ್ಲಿ ವ್ಯಯವಾಗದೆ, ರಚನಾತ್ಮಕ ಅಭಿವ್ಯಕ್ತಿ ಹೊಂದುವಂತೆ ಯೋಚಿಸಬೇಕು. ಈ ದ್ವಿಮುಖ ಕಾರ್ಯಾಚರಣೆಗೆ ಬೇಕಾಗುವ ಸ್ಫೂರ್ತಿಯನ್ನು ವಿಜಯದಶಮಿ ತನ್ನ ಗರ್ಭದಲ್ಲಿ ಹೊತ್ತು ನಿಂತಿದೆ. ಈ ಹಬ್ಬ ನಮ್ಮ ಶಕ್ತಿ ಸಂಚಯ, ರಾಷ್ಟ್ರಭದ್ರತೆ ಹಾಗೂ ಸಂಪತ್ ಸಾಧನೆಯನ್ನು ಪ್ರಚೋದಿಸಲೆಂದು ರೂಪುಗೊಂಡಿದೆ, ಇದನ್ನು ಅರಿತು ಮುನ್ನಡೆಯುವ ದೃಷ್ಟಿ ನಮಗೆ ಬೇಕಷ್ಟೆ ?

ಶಮೀ (ಬನ್ನಿ) ಬಂಗಾರದ ಸಂಕೇತವಾಗಿ ನಿಂತಿರುವುದರ ಹಿನ್ನೆಲೆಯಲ್ಲಿ ಪೌರಾಣಿಕ ಕಥೆಯೊಂದು ಅರಳಿದೆ, ಗುರುಕುಲ ವಿದ್ಯಾರ್ಥಿ ಉದ್ಧಾಲಕನಿಂದ ಅವನ ಗುರು ಹದಿನಾಲ್ಕು ಕೋಟಿ ಸುವರ್ಣ ಮುದ್ರಿಕೆಗಳನ್ನು ಗುರುದಕ್ಷಿಣೆಯಾಗಿ ಬಯಸಿದನಂತೆ. ಈ ಮುದ್ರಿಕೆಗಳನ್ನು ಒಂದೇ ಎಡೆಯಿಂದ ತರಬೇಕೆಂದೂ ಗುರು ಆಶಿಸಿದ, ಉದ್ದಾಲಕ ಸೂರ್ಯವಂಶದ ಸಾರ್ವಭೌಮ ರಘುರಾಜನಲ್ಲಿಗೆ ಸಹಾಯ ಯಾಚಿಸಿ ಬಂದ. ಆದರೆ ದಾನ ವೀರನಾದ ರಘುರಾಜ, ಆಗ ತಾನೆ ವಿಶ್ವಜಿತು ಯಾಗವನ್ನು ಮುಗಿಸಿ ಬರಿಗೈಯಾಗಿದ್ದ. ಈ ಹಂತದಲ್ಲಿ ಅರಸನಿಗೆ ದೇವೇಂದ್ರನಿಂದ ತನಗೆ ಅನೇಕ ವರ್ಷಗಳಿಂದ ಸಂದಾಯವಾಗದೆ ಉಳಿದ ಕಾಣಿಕೆಯ ಧನದ ನೆನಪಾಯಿತು. ಇಂದ್ರ ಲೋಕದ ಮೇಲೆ ದಾಳಿಯಿಕ್ಕಿ, ಆ ಹಣವನ್ನು ತರಬೇಕೆಂದು ರಘುರಾಜ ಹವಣಿಸತೊಡಗಿದ. ತ್ರಿಲೋಕ ಸಂಚಾರಿ ನಾರದರಿಂದ ಈ ಸಂಗತಿ ದೇವೇಂದ್ರನಿಗೆ ತಿಳಿಯಿತು, ರಘುರಾಜನ ಸತ್ವ ಶಕ್ತಿಗಳನ್ನರಿತ ದೇವೇಂದ್ರ ಕೂಡಲೆ ಕುಬೇರನನ್ನು ಕರೆಯಿಸಿ, ರಾಜನಿಗೆ ಸಲ್ಲಬೇಕಾದ ಕಾಣಿಕೆಯನ್ನು ಈಗಲೇ ಸಲ್ಲಿಸಬೇಕೆಂದು ಆಜ್ಞೆ ಮಾಡಿದ, ಕುಬೇರನು ರಘುರಾಜನ ಶಮಿವೃಕ್ಷಗಳ ಉದ್ಯಾನದಲ್ಲಿ ಸುವರ್ಣ ಮುದ್ರಿಕೆಗಳ ಮಳೆಯನ್ನು ಸುರಿಸಿದ. ಉದ್ದಾಲಕ ಆ ರಾಶಿಯಿಂದ ಹದಿನಾಲ್ಕು ಕೋಟಿ ಮುದ್ರಿಕೆಗಳನ್ನು ಗುರು ದಕ್ಷಣೆಗೆಂದು ತಕ್ಕೊಂಡು ಹೋದ. ಉದ್ಯಾನದಲ್ಲಿ ಬಿದ್ದ ಮಿಕ್ಕ ಸುವರ್ಣ ಮುದ್ರಿಕೆಗಳನ್ನು ರಘುರಾಜನು ತನ್ನವೆಂದು ಸ್ವೀಕರಿಸಲಿಲ್ಲ, ಪ್ರಜೆಗಳಿಗೆ ಹಂಚಿದ, ಶಮೀ

ವೃಕ್ಷಗಳ ಉದ್ಯಾನದಲ್ಲಿ ಸುವರ್ಣ ಮುದ್ರಿಕೆಗಳ ವೃಷ್ಟಿ ಸುರಿದದ್ದು ವಿಜಯ ದಶಮಿಯ ಶುಭ ದಿನ.

೪. ದೀಪಾವಳಿ

'ಹಬ್ಬಗಳ ರಾಜ' ಎಂದು ಹೆಸರಾಗಿರುವ ದೀಪಾವಳಿ ನಮ್ಮ ರಾಷ್ಟ್ರೀಯ ಹಬ್ಬಗಳಲ್ಲಿ ಪ್ರಮುಖವಾದುದು. ದೇಶದಾದ್ಯಂತ ಆಚರಣೆಯಲ್ಲಿರುವುದು ಇದರ ವಿಶೇಷ. ದೀಪಾವಳಿ, ದಿವಾಲಿ, ದೀಪಾಲಿಕಾ, ಈ ಹೆಸರುಗಳನ್ನು ಹೊಂದಿರುವ ಈ ಹಬ್ಬ ಪೌರಾಣಿಕ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ತುಂಬ ಮಹತ್ವದ್ದು. ಇದು ಕತ್ತಲೆಯಿಂದ ಬೆಳಕಿನೆಡೆಗೆ ಕರೆದೊಯ್ಯುವ ಕೈ ದೀವಿಗೆಯಾಗಿದೆ. ಕತ್ತಲೆಗೂ ಬೆಳಕಿಗೂ ನಡೆದಿರುವ ನಿರಂತರ ಹೋರಾಟದಲ್ಲಿ ಬೆಳಕು ಗೆಲ್ಲುವುದರ ಸಂಕೇತ ದೀಪಾವಳಿ ಬೆಳಕು ಎಲ್ಲ ಚೇತನಗಳ ಆಧಾರ, ಕ್ರಿಯಾಶಕ್ತಿ, ಬೆಳಕೇ ಬದುಕು. ಅಂತೆಯೇ, ಮಾನವ ಬೆಳಕನ್ನು ಕುರಿತು ನಾನಾ ವಿಧದಲ್ಲಿ ಪ್ರಾರ್ಥನೆ ಮಾಡಿದ್ದಾನೆ, ಅದನ್ನು 'ಜ್ಞಾನ' ಎಂದು ಆರಾಧಿಸಿದ್ದಾನೆ.

ಆಶ್ವಿನ ಮಾಸದ ಕೊನೆ ಹಾಗೂ ಕಾರ್ತಿಕ ಮಾಸದ ಪ್ರಾರಂಭದ ಭಾಗಗಳಲ್ಲಿ ದೀಪಾವಳಿ ಹಬ್ಬ ಹರಡಿರುವುದು. ಇದನ್ನು ಮೂರು ದಿನಗಳಿಂದ ಐದು ದಿನಗಳ ವರೆಗೆ ಆಚರಿಸುವ ರೂಢಿ ಇದೆ. ಈ ಆಚರಣೆಯ ವೈಶಿಷ್ಟ್ಯಗಳನ್ನು ಕನ್ನಡ ಕವಿಗಳು ಕಂಡ ಬಗೆ ನಿಜಕ್ಕೂ ಮನಸೂರೆಗೊಳ್ಳುವಂತಿದೆ. **ಡಾ॥ ಡಿ. ಎಸ್. ಕರ್ಕಿ** ಅವರು ದೀಪಾವಳಿಯನ್ನು ಕಲ್ಪಿಸಿಕೊಂಡಿರುವುದು ಇಂತು—

ಹಬ್ಬಗಳಿಗಿದು ಹಬ್ಬ
ಸೊಡರುಗಳ ಹಬ್ಬ
ನಮ್ಮವರು ವಿರಚಿಸಿದ
ಸಂಸ್ಕೃತಿಯ ದಿಬ್ಬ!

('ಮುಡಿಸಿಹರು ದೀಪ')

ಬಡವ-ಶ್ರೀಮಂತ ಎಂಬ ತಾರತಮ್ಯವಿಲ್ಲದೆ ಎಲ್ಲರ ಮನೆಗಳನ್ನು ಬೆಳಗುವ ದೀಪಾವಳಿಯಲ್ಲಿ **ಪ್ರೊ॥ ಚಂದ್ರಶೇಖರ ಪಾಟೀಲ** ಅವರು ಸಮತೆಯನ್ನು ಗುರುತಿಸುವರು ಹಾಗೂ ಅದನ್ನು ಬರಮಾಡಿಕೊಳ್ಳುವರು–

ಬಂತು ದೀಪಾವಳಿ
ಮನೆಗಳಲಿ, ಮನಗಳಲಿ
ಮೂಲೆ ಮೂಲೆಯ ತಬ್ಬಿ ಮುತ್ತಿಡುವ ಕತ್ತಲೆಗೆ
ತಂತು ನಡುಕದ ವೈಖಳಿ,
ತಲೆಯೆತ್ತಿ ನಗುತಲಿಹ ಮಹಲಿನಲ್ಲಿ
ಅದನ್ನೆತ್ತಿ ತೇಕುತಿಹ ಗುಡಿಸಲಲ್ಲಿ
ಎಲ್ಲಿ ನೋಡಿದರಲ್ಲಿ ದೀಪಗಳ ಹಾವಳಿ.

('ದೀಪಾವಳಿ'–ಬಾನುಲಿ)

ವರ್ಷಾಕಾಲದಲ್ಲಿ ಕಾಂತಿಹೀನವಾಗಿದ್ದ ಮನೆ-ಮಠಗಳು ಈಗ ಸುಣ್ಣ-ಬಣ್ಣ ಕಂಡು, ಹೊಸ ಬೆಡಗು ಹೊತ್ತು ನಿಲ್ಲುತ್ತವೆ. ಮನೆ-ಮಂದಿರಗಳಲ್ಲಿ ದೀಪಗಳು ಹೊತ್ತಿಕೊಂಡು ಕತ್ತಲೆಯೊಡನೆ ಹೋರಾಟ ನಡೆಸುತ್ತವೆ. ಕಾರ್ತಿಕ ಮಾಸ ನಿಜಕ್ಕೂ ಬೆಳಕಿನ ಸುಗ್ಗಿ- 'ಹಣತೆಯ ಹಡಗಾಗಿವೆ ಮನೆ ಮನೆಯೂ ಕತ್ತಲ

ಕಡಲೊಳಗೆ...' ಬೆಳಕಿನ ಕಿರಣಗಳು ಕತ್ತಲೆಗೆ ಮಾತ್ರವಲ್ಲ, ಮನುಷ್ಯನ ಮನಸ್ಸಿನ ಜಡತ್ವಕ್ಕೂ ತಕ್ಕ ಮದ್ದಾಗಿವೆ. **ಡಾ॥ ಪು. ತಿ. ನರಸಿಂಹಾಚಾರ್ಯರ** ಅವರ ವಿಚಾರ ಲಹರಿಯನ್ನಿಲ್ಲಿ ನೆನೆಯಬೇಕು. ದೈವೀ ಶಕ್ತಿ ಅಣುಹೃದಯದಲ್ಲಿ ಪವಡಿಸುತ್ತ ಸೃಷ್ಟಿಯ ಕನಸು ಕಂಡುದನ್ನು ಕವಿಸ್ಮರಿಸುವನು- 'ತಾನೆಚ್ಚರೆ ಜಗವೆಲ್ಲವ ಬರಿ ತೇಜದಿ ತುಂಬುವನು'-

ಬಂದಿತು ದೀಪಾವಳಿ ಮನೆ ಮನೆಯೊಳು
ಕುಡಿಯಾಡಿಸುತಿದೆ ನರು ಬೆಳಕು

....

ಕತ್ತಲೊಡನೆ ಪಂತವಿಲ್ಲವಿವಕೆ
ತಮದೊಡನಜ್ಜಿ ಯಾಟವಾಡುವಂಥ ಬಯಕೆ
ಇನ ಹಚ್ಚುತ್ತಿರುವ ಮಕ್ಕಳಂತೆ ಮುದ್ದು
ಈ ನೋಟವನ್ನು ನುನದ ಜಡಕೆ ಮುದ್ದು

....

ನರಕನ ನೆನೆವುದು ಮನ ನಲಿದೀ ದಿನ
ಬೆಳಕಿನ ತೆನೆಗಳ ಬೆಳೆಸುತ್ತ

('ದೀಪಾವಳಿ'—ರಸಸರಸ್ವತಿ ಮತ್ತು ಇತರ ಕವನಗಳು)

ಮನೆ ಮನೆಗಳನ್ನು ಬೆಳಗುವ ದೀಪಗಳ ಬೆಡಗು ಒಂದು ಬಗೆಯಾದರೆ, ಮನೆಗಳ ಎದುರು ಹಾಗೂ ಮೇಲೆ ಬೆಳಗುವ ಆಕಾಶಬುಟ್ಟಿಗಳ ಸೊಬಗು ಇನ್ನೊಂದು ಬಗೆಯಾಗಿರುವುದು, ಬಣ್ಣ ಬಣ್ಣದ ಶಿವನ ಬುಟ್ಟಿಗಳು ನಿಜಕ್ಕೂ ಗಂಧರ್ವಲೋಕವೊಂದನ್ನು ಇಲ್ಲಿ ವಿರಚಿಸುತ್ತವೆ, ಕತ್ತಲೆ ಕವಿಯುತ್ತಿರು

ವಂತೆಯೋ ವಿವಿಧ ಆಕೃತಿಯ, ನಾನಾ ನಮೂನೆಯ ಆಕಾಶ ಬುಟ್ಟಿಗಳು ಆಗಸದ ಅಂಗಳದಲ್ಲಿ ಏರಿಳಿಯುವುದನ್ನು ನೋಡು ವುದು ಕಣ್ಣಿಗೊಂದು ಹಬ್ಬ. **ಶ್ರೀ ಚೆನ್ನವೀರ ಕಣವಿ** ಅವರು ಆಕಾಶಬುಟ್ಟಿಗಳ ಬೆಡಗನ್ನು ಸೊಗಸಾಗಿ ಸೆರೆಹಿಡಿದಿ ರುವರು.

ಹೊಗೆ ತುಂಬಿ
ನಗೆ ತುಂಬಿ
ಬಣ್ಣ ಬಣ್ಣದ ನವಿರು ಕಾಗದದ ಬುಟ್ಟಿಯಲಿ
ಜೀವ ತುಂಬಿ
ದೂರ ಹಾರುವುದೆಂಬ ಭರವಸೆಯ ನಂಬಿ,
ನಮ್ಮ ಹಿರಿಯಾಸೆಗಳ ಉರಿವ ಕಕ್ಕಡವಿಟ್ಟು
ಉತ್ಸಾಹ ಸಾಹಸಕೆ ರೂಪುಗೊಟ್ಟು
ಮೇಲುನಾಡಿಗೆ ತೇಲಿಬಿಟ್ಟೆವಿದೊ
ಚೈತನ್ಯದಾಕಾರ ಬುಟ್ಟಿ!
('ಆಕಾಶ ಬುಟ್ಟಿ'—ಆಕಾಶ ಬುಟ್ಟಿ)

ಈ ಆಕಾಶ ಬುಟ್ಟಿ ಏರುವುದೊ ಇಳಿವುದೊ, ಗಾಳಿಯ ಆಘಾತಕ್ಕೆ ಜೋಲಿ ಹೊಡೆದು ಉರುಳುವುದೊ ಎಂದು ಕವಿ ಮನದಲ್ಲಿ ತಳ್ಳಂಕ, ಜೊತೆಗೆ, ಅದು ಬೆಳ್ಳಿಚಿಕ್ಕೆಗೆ ತೆಕ್ಕಿ ಹಾಕಿ, ಬೆಳಕು ಬೆಳಕಿಗೆ ಏರುತ್ತ ಕೊಟ್ಟ ಸುಂದರ ಕಲ್ಪನೆಯನ್ನು ಕವಿ ಮೂಡಿಸುವನು. ಆಕಾಶ ಬುಟ್ಟಿ ಕೇವಲ ಮಕ್ಕಳ ಆಟಿಕೆ ಯಲ್ಲ, ಅದು ಎಲ್ಲ ವಯಸ್ಸಿನವರ ಚೈತನ್ಯದ ಹಾಗೂ ಹಿರಿ ಯಾಸೆಗಳ ಸಂಕೇತ. ತನ್ನಂತೆ ಊರ್ಧ್ವಮುಖವಾಗಿ ಮುನ್ನಡೆ

ಯೆಂದು ಅದು ಕರೆ ನೀಡುತ್ತದೆ. ಏಕಾಕಿಯಾದರೂ ಆತ್ಮ ಬಲ ಅದರ ಬೆನ್ನಿಗಿದೆ ತಾನೆ. ಹೀನ ಮಾನವ ರಚಿತ ಆಕಾಶ ಬುಟ್ಟಿ, ದಾನವರ ಬಿರುಗಾಳಿ ದಾಳಿಯನು ಮೆಟ್ಟಿ ಬಾನವರನು ಅಪ್ಪಿ ಒಂದಾಗಿರುವ ರೀತಿ ಕವಿಯಲ್ಲಿ ಬೆರಗು ಮೂಡಿಸಿದೆ, 'ಆತ್ಮ ಬಲದೆದುಗು ಮೇಣುಳಿದ ಬಲವೆ ?' ಎಂದು ಕವಿ ಉದ್ಗಾರ ತೆಗೆಯುವನು.

ತ್ರಯೋದಶಿಯೊಡನೆ ಪ್ರಾರಂಭವಾಗುವ ದೀಪಾವಳಿ ಹಬ್ಬ ಎರಡನೆಯ ದಿನವಾದ ನರಕ ಚತುರ್ದಶಿಯಂದು ಪ್ರಾಮುಖ್ಯತೆ ಪಡೆಯುವುದು. ಕೃಷ್ಣಾವತಾರದಲ್ಲಿ ಶ್ರೀ ವಿಷ್ಣು ಗೈದ ನರಕಾಸುರ ಸಂಹಾರ, ಅಸುರನ ಸೆರೆಯಲ್ಲಿದ್ದ ದೇವ ಕನ್ಯೆಯರ ಬಂಧ ವಿಮೋಚನೆ ಇವುಗಳ ನೆನಪನ್ನು ಈ ದಿನ ಹೊತ್ತು ನಿಂತಿದೆ. **ಶ್ರೀ ಕೆ. ಎಸ್. ನರಸಿಂಹಸ್ವಾಮಿ** ಅವರು, ದೇವತೆಗಳ ಪೊರೆಗೆ ತಮ್ಮ ಕವನದಲ್ಲಿ ಮೂರ್ತರೂಪ ಕೊಟ್ಟಿದ್ದಾರೆ, ಕೃಷ್ಣನಿಗೆ ಕಲಿಯಾಗಿ ಬರಲು ಕರೆ ನೀಡಿದ್ದಾರೆ–

ಕೊಳಲನೆಸೆದು ಬಾ। ಸಪ್ತ ಸ್ವರಂಗಳನು
ಸಪ್ತಸಾಗರಗಳಲಿ ಅಬ್ಬರಿಸಿ, ಬಾ,
ತಾರೆಗಳೆಲ್ಲ ತತ್ತರಿಸಿ,
ಬಾನು ತಿರ್‍ರನೆ ತಿರುಗಿ, ನೆಲ ನಡುಗಿ ದಿಕ್ಕು ದಿಕ್ಕಿಗೆ
ಮಿಂಚು ಹಾರುತಿರಲು !

('ಕಲಿಯಾಗಿ ಬಾ ಕೃಷ್ಣ'—ದೀಪದ ಮಲ್ಲಿ)

ದುಷ್ಟ ನಿಗ್ರಹ ಹಾಗೂ ಶಿಷ್ಟ ಪರಿಪಾಲನೆಯನ್ನು ತನ್ನ ಜೀವನಮಂತ್ರವಾಗಿರಿಸಿಕೊಂಡ ಶ್ರೀ ಕೃಷ್ಣ ಕೈ ಕಟ್ಟಿ ಕುಳಿತು

ಕೊಳ್ಳುವನೆ? ಸತಿ ಸತ್ಯಭಾಮೆಯೊಡನೆ ಅಸುರನ ರಾಜಧಾನಿ ಪ್ರಾಗ್ ಜ್ಯೋತಿಷ್‌ಪುರಕ್ಕೆ ನಡೆತಂದ ಕೃಷ್ಣ ತನ್ನ ಪವಾಡ ವನ್ನಲ್ಲಿ ತೋರುವನು.

ಡಾ॥ ಜಿ. ಎಸ್. ಶಿವರುದ್ರಪ್ಪ ಅವರು ಹಾಡಿದಂತೆ, ದೀಪಾವಳಿ ನರಕಾಸುರ ವಧೆಗೆಂದು ನಡೆದು ಬರುವುದು-

ಬಂದಿತು ದೀಪಾವಳಿ ಮನೆ ಮನೆಗೆ
ನರಕಾಸುರ ವಧೆಗೆ!
ಯುಗ ಯುಗದವತಾರದ ಭವ್ಯಸ್ಮೃತಿಯನು
ಉದ್ದೀಪನಗೊಳಿಸಿ,
ಕವಿಯುವ ತಮ ಹರಿಸಿ
....

('ದೀಪಾವಳಿ'—ದೇವಶಿಲ್ಪ)

ಅಂದು ನಡೆದ ಕೃಷ್ಣ-ನರಕಾಸುರರ ಯುದ್ಧದ ಸಂಕೇತ ವಾಗಿ ಇಂದು ಪಟಾಕಿ ಹಾಗೂ ಬಾಣ-ಬಿರುಸುಗಳು ಸೂರೆ ಯಾಗುತ್ತವೆ.

ದೀಪಾವಳಿಯ ಮೂರನೆಯ ದಿನವಾದ ಅಮಾವಾಸ್ಯೆ ಯಂದು ಲಕ್ಷ್ಮೀಪೂಜೆಯಾದರೆ, ಮರುದಿನವೆ ಬಲಿಪ್ರತಿಪದ ದಾನಶೂರ ಬಲಿಚಕ್ರವರ್ತಿಗೆ ರಾಜ್ಯ ವಿಸ್ತರಣೆಯ ದಾಹ ಬಡಿದು ಕೊಂಡಿತು. ಹರಿ ವಾಮನನಾಗಿ ಅವತರಿಸಿ, ತ್ರಿವಿಕ್ರಮನಾಗಿ ನಿಂತು ರಕ್ಕಸನನ್ನು ಪಾತಾಳಕ್ಕೆ ಮೆಟ್ಟಿದ. ಬಲಿಯ ದಾನಗುಣ, ನಮ್ರತೆ ಹಾಗೂ ಭಕ್ತಿಗಾಗಿ ಈ ದಿನದ ಆಚರಣೆ ಮೀಸಲಾಗಿದೆ. ಈ ದಿನ ಬಲಿ ತನ್ನ ಪ್ರಜೆಗಳನ್ನು ನೋಡಿ ಹೋಗಲು ಪಾತಾಳ ದಿಂದ ಭೂಲೋಕಕ್ಕೆ ಬರುವನೆಂದು ನಂಬಿಕೆ.

ತಮಸ್ಸಿನಿಂದ ಜ್ಯೋತಿಗೆ ಮುನ್ನಡೆಯಬೇಕೆಂಬ ಹಂಬಲ ದೀಪಾವಳಿಯ ಆಧ್ಯಾತ್ಮಿಕ ಹಾಗೂ ಲೌಕಿಕ ಸಂದೇಶವಾಗಿದೆ. ಕವಿಯೊಬ್ಬ ಕನವರಿಸುವನು, 'ಬೆಳಕಿಗಾಗಿ ನಿರಂತರವು ಯಾಚನೆ, ಕೈ ಹಿಡಿದು ನಡೆಸೆನ್ನನು ತಮಸ್ಸಿನಿಂದ ಜ್ಯೋತಿಗೆ.' **ಶ್ರೀ ಗೋಪಾಲಕೃಷ್ಣ ಅಡಿಗ** ಅವರ 'ನಂದಾದೀಪ' ಕವನ ದಲ್ಲಿಯೂ ಇದೇ ಬೆಳಕಿನ ಅನ್ವೇಷಣೆ ಹುದುಗಿದೆ.

ಸಿಂಧುವಾಗಲಿ ನಿನ್ನ ದೀಪ ಬಿಂದು
ನೀನಲ್ಲದೆನಗಿಲ್ಲ, ಅನ್ಯ ಬಂಧು!
ನೀ ಸ್ವಯಂ ಪ್ರಭು; ಬಾರ ನನ್ನ ಬೆಂಬಲಕೆ;
ಓ ಚೆನ್ನ ಬೆಳಕೆ, ಬೆಳಕೇ!

('ನಂದಾದೀಪ'—ಕಟ್ಟುವೆವು ನಾವು)

ದೀಪಾವಳಿಯ ಐದನೆಯ ದಿನವಾದ ಯಮದ್ವಿತೀಯಾ ವನ್ನು 'ಭಾವಬಿದಿಗೆ' ಎಂದೂ ಕರೆಯುವುದುಂಟು. ಅಂದು ಯಮನು ತನ್ನ ಸೋದರಿಯರ ಮನೆಯಲ್ಲಿ ಆತಿಥ್ಯ ಸ್ವೀಕರಿಸಿದ ನೆಂದು ಪ್ರತೀತಿ, ಇದರ ಪ್ರತೀಕವಾಗಿ, ಇಂದು ಅಕ್ಕ-ತಂಗಿ ಯರ ಮನೆಯಲ್ಲಿ ಅಣ್ಣ-ತಮ್ಮಂದಿರು. ಆದರ ಸತ್ಕಾರ ಪಡೆ ಯುತ್ತಾರೆ. ಇದು ಹಿಂದಿನಿಂದ ನಡೆದು ಬಂದ ರೂಢಿ. **ದೀಪಾವಳಿ** ಆಬಾಲವೃದ್ಧರನ್ನು ಏಕಪ್ರಕಾರವಾಗಿ ರಂಜಿಸುವ ಹಬ್ಬವಾಗಿದೆ. ಮಕ್ಕಳಿಗೆ ಈಗೆಲ್ಲ ಹೊಸ ಉಡುಪು, ಪಟಾಕಿ ಹಾಗೂ ಔತಣದ ಹರುಷ, ಹೊಸ ಅಳಿಯನಿಗೆ ಈಗ ಮಾವನ ಮನೆಯಲ್ಲಿ 'ಅಳಿಯತನ' ದ ಸಡಗರ, ರಾಜೋಪಚಾರ. ಹಿರಿ ಯರಿಗೆ ಪೂಜೆ-ಪುನಸ್ಕಾರಗಳ ಸಂಭ್ರಮ ಹೆಣ್ಣುಮಕ್ಕಳಿಗೂ

ಒಂದೆಡೆ ಸಿಹಿ–ತಿಂಡಿ ತಿನಿಸುಗಳ ತಯಾರಿಕೆಯು ಕೆಲಸವಾದರೆ, ಇನ್ನೊಂದೆಡೆ ಆರತಿ-ಅಕ್ಷತೆಗಳ ಅವಸರ. ಬಣ್ಣ ಬಣ್ಣದ ಆಕಾಶ ಬುಟ್ಟಿಗಳು, ಸಾಲಾಗಿ ವಿರಚಿಸಿದ ದೀಪ ಮಾಲೆಗಳು–ಇವು ಮನೆಗಳ ಬೆಡಗನ್ನು ಇನ್ನಷ್ಟು ಹೆಚ್ಚಿಸುವವು.

ಆದರೆ ಇವಿಷ್ಟು ಮಾತ್ರ ದೀಪಾವಳಿಯ ಆಚರಣೆಯನ್ನು ಪೂರ್ಣಗೊಳಿಸಲಾರವು. **ಶ್ರೀ ಗೋಪಾಲಕೃಷ್ಣ ಅಡಿಗ** ಅವರು ಎಚ್ಚರಿಸಿರುವಂತೆ—

ಬರಿಯ ಬಯಲಾಡಂಬರದ ದೀಪಗಳ ಸಾಲ
ನುರಿಸುವಿರದೇಕೆ ಕನ್ನಡರೆ? ನೀವಿಂದು ಸಿಂ
ಗರಿಸಿರೈ ಕರ್ನಾಟಕಾಭಿಮಾನ ಜ್ಯೋತಿಯಿಂದೆ
ನಿಮ್ಮ ದೆವನೆಯನು !

('ದೀಪಾವಳಿ'—ಭಾವ ತರಂಗ)

ಅಂದಾಗ ಮಾತ್ರ ನಾಡಿನಲ್ಲಿ ದೀಪಾವಳಿಯ ಆಚರಣೆ ಸಾರ್ಥಕ. 'ಅಂದೇ ಸಾರ್ಥಮಯದು ದೀವಳಿಗೆ ನಮ್ಮೀ ನಾಡಿಗೆ; **ಶ್ರೀ ಅಡಿಗರೇ** ತಮ್ಮ ಇನ್ನೊಂದು ಕವನದಲ್ಲಿ ಹಾರೈಸಿರುವಂತೆ—

ಇಂದು ದೀಪಾವಳಿಗೆ ತೆರೆ ಅಗಲ ಬಾಗಿಲ
ಸೊಂಡಿಲಾಡಿಸಿ ಬರಲಿ ಆನೆ, ಮುದ ಮದ್ದಾನೆ
ಬೆಳಕು ಬೃಂಹಿತದ ಸಂಹಿತೆ ಕೇಳಿ ತೊಳೆಯಲಿ
ಒಳಮನೆಯ ಕಸವು ಕೊಳೆ, ಜೇಡರ ಬಲೆ,
ಮಸಣದಲಿ ಕ್ಷಣಕಾಲ ಛಟ ಛಟೆದ ಬಾಳ ನೊಣೆ

ಪೇರಳ ಗಿಡದ ಕೆಳಗೆ ಮತ್ತೆ ಕ್ಷಣ ಮರಳ ಮನೆ,
ಎಲ್ಲೂ ಹೋಗದು ಕಣೊ ನಿನ್ನ ಆ ಕಾಳ ಕೋಣೆ,

('ದೀಪಾವಳಿ'—ಅಡಿಗರ ಆಯ್ದ ಕವನಗಳು)

ದೀಪಾವಳಿಯಂದು ನಾವು ನಮ್ಮ ಆತ್ಮದ ಜ್ಯೋತಿಯನ್ನು ಬೆಳಗಿಸಿಕೊಳ್ಳಬೇಕು, ಮನಕ್ಕೆ ಹತ್ತಿದ ಮಾಲಿನ್ಯವನ್ನು ಜ್ಞಾನ, ವಿವೇಕ, ದೈವಭಕ್ತಿ, ಸೌಹಾರ್ದಗಳಿಂದ ತೊಡೆದು ಹಾಕಬೇಕು. ಮನದಲ್ಲಿ ಪರಮಾತ್ಮನಿಗಾಗಿ ಹಣತೆಯನ್ನು ಹಚ್ಚಬೇಕು. ಶತಮಾನಗಳಿಂದ ಬೆಳಕಿನ ಅನ್ವೇಷಣೆ, ಆರಾಧನೆ ನಡೆದಿದ್ದು, '**ಶ್ರೀ**' (ಬಿ. ಎಂ. ಶ್ರೀಕಂಠಯ್ಯ) ಅವರ 'ಪ್ರಾರ್ಥನೆ'ಯಲ್ಲಿ ಅದು ಹೃದಯಂಗಮವಾಗಿ ಒಡಮೂಡಿದೆ–

ಕರುಣಾಳು, ಬಾ ಬೆಳಕೆ, ಮುಸುಕಿದೀ ಮಬ್ಬಿನಲಿ
ಕೈ ಹಿಡಿದು ನಡೆಸೆನ್ನನು
ಇರುಳು ಕತ್ತಲೆಯ ಗವಿ; ಮನೆ ದೂರ; ಕನಿಕರಿಸಿ
ಕೈ ಹಿಡಿದು ನಡೆಸೆನ್ನನು.
ಹೇಳಿ ನನ್ನಡಿಯಿಡಿಸು; ಬಲು ದೂರ ನೋಟವನು
ಕೇಳೆನೊಡನೆಯೆ–ಸಾಕು ನನಗೊಂದು ಹೆಜ್ಜೆ

('ಪ್ರಾರ್ಥನೆ'—ಇಂಗ್ಲೀಷ ಗೀತಗಳು)
ಮೂಲ ಕವನ—ನ್ಯೂಮನ್)

ದೀಪಾವಳಿಯ ಹಬ್ಬವನ್ನು ಉತ್ತರ ಕರ್ನಾಟಕದಲ್ಲಿ 'ಹಟ್ಟಿಯ ಹಬ್ಬ' ಎಂದು ಕರೆಯುವುದುಂಟು. ಈ ಕಾಲದಲ್ಲಿ ಪಾಲಿಸುವ ಜಾನಪದ ಸಂಪ್ರದಾಯಗಳಲ್ಲಿ ದನಗಾಹಿ ಸಂಸ್ಕೃತಿ ಎದ್ದು ಕಾಣುವದು. ದೀಪಾವಳಿಯ ಪ್ರತಿಪದೆಯಂದು 'ಮಾರ್ಗಪಾಲೀ' ಎಂಬ ದೇವತೆಯ ಪೂಜೆ

ನಡೆಯುವುದು. ಈ ದೇವತೆ ಪಶುಧನ ರಕ್ಷಕಳೆಂದು ನಂಬಿಕೆ, ಈಗ ಹಳ್ಳಿಗಳಲ್ಲಿ ನಡೆಯುವ ದನಗಳ ಪೂಜೆ ಹಾಗೂ ಮೆರವಣಿಗೆಗಳಲ್ಲಿ ಮಾರ್ಗಪಾಲೀ ಆರಾಧನೆಯನ್ನು ಗುರುತಿಸಬಹುದು. ದೀಪಾವಳಿಯಲ್ಲಿ ಗವಳಿಗರ ಹಟ್ಟಿಗಳು ವಿಶೇಷ ಅಲಂಕಾರ ಪಡೆಯುವವು. ಕುರುಬರು ಈಗ ತಮ್ಮ ಕುರಿಗಳ ಮೆರವಣಿಗೆ ನಡೆಸುವರು. ನಮ್ಮ ಜನಪದ ಕವಿಯೊಬ್ಬ ದೀಪಾವಳಿಯ ಒಸಗೆಯನ್ನು ತುಂಬ ಅರ್ಥಪೂರ್ಣವಾಗಿ ಸಾರಿರುವನು. ಅವರ ಭಾವ ದೀಪ್ತಿ ನಮ್ಮ ದೈನಂದಿನ ಬಾಳು ಬೆಳಗುವ ದಾರಿ ದೀಪವಾಗಲಿ–

ಮುಳ್ಳಾಗೆ ಕಲ್ಲಾಗೆ ಬಂಧೇವಯ್ಯ
ತಂದೇವಿ ದೀಪಾನ ಕೊಳ್ಳೀರಯ್ಯ
ಕತ್ತಲು ಹಾದ್ಯಾಗ ಬಂಧೇವಯ್ಯ
ತಂದೇವಿ ದೀಪಾನ ಕೊಳ್ಳೀರಯ್ಯ
ದೀಪ ಕೊಂಡವರಿಗೆ ದೊರೆ ಪದವಿ ದೊರೆಯಲಿ
ದೀಪ ದೇವರ ಕರುಣ ಇರಲಿ!

(ಕನ್ನಡ ಜನಪದ ಗೀತಗಳು ಸಂ. ಡಾ. ಗದ್ದಗಿಮಠ)

ಆತ್ಮಕ್ಕೆ ಹತ್ತಿದ ಮಾಲಿನ್ಯವನ್ನು ಭಕ್ತಿ ಹಾಗೂ ಸದಾಚಾರಗಳಿಂದ ತೊಳೆಯಬೇಕೆಂಬುದು ದೀಪಾವಳಿ ಹಬ್ಬದ ಹಂಬಲ. ಆತ್ಮ ವಿಜಯದ ಬಯಕೆಯಲ್ಲಿ ಇದೊಂದು ಪ್ರಾಮಾಣಿಕ ಪ್ರಯತ್ನ, ದಾರ್ಶನಿಕ ಪ್ಲೇಟೊ ಹೇಳಿದಂತೆ, "ಆತ್ಮ ವಿಜಯದಷ್ಟು ಉನ್ನತ ಜಯ ಇನ್ನೊಂದಿಲ್ಲ, ತಾನೆ." ಜೊತೆಗೆ, ಸಾತ್ವಿಕ ಶಕ್ತಿಗಳು ತಲೆ ಎತ್ತಿ, ಮೈತುಂಬಿಕೊಂಡು ನಿಲ್ಲಬೇಕೆಂಬ

ಆಶಯು ದೀಪಾವಳಿಯ ಆಚರಣೆಯಲ್ಲಿದೆ. ಶತಮಾನಗಳಿಂದ ಭಾರತೀಯರು ಆಧ್ಯಾತ್ಮಿಕ ಜೀವನವನ್ನು ಲೌಕಿಕದೊಡನೆ ಸಮನ್ವಯಗೊಳಿಸುವ ಸಫಲ ಯತ್ನ ಮಾಡುತ್ತ ಬಂದಿದ್ದಾರೆ. ದೀಪಾವಳಿ ತನ್ನ ಲೌಕಿಕ ಪರಿಸರದಲ್ಲಿ ಬೀರುವ ಸಂದೇಶ ಕೂಡ ಅರ್ಥಪೂರ್ಣವಾಗಿದೆ. ದೀಪವನ್ನು 'ಜ್ಞಾನ' ಎಂದು ಭಾವಿಸಿ ರುವುದರಿಂದ, 'ದೀಪಾರಾಧನೆ' ಪರೋಕ್ಷವಾಗಿ ಜ್ಞಾನದ ಪೂಜೆಯೇ ಆಗಿದೆ. ಬಂಧು-ಬಾಂಧವರಲ್ಲಿ ಆತ್ಮೀಯತೆಯ ಎಳೆಗಳನ್ನು ಗಟ್ಟಿಗೊಳಿಸುವುದು ಈ ಹಬ್ಬದಿಂದ ಸಾಧ್ಯವಾಗಿದೆ. ಆಪ್ತೇಷ್ಟರ ಸಮ್ಮಿಲನ, ಸಾಮೂಹಿಕ ಆರತಿ ಅರ್ಚನೆ, ಉಡು ಗೊರೆ ವಿನಿಮಯ—ಇವು ಸ್ವಾಭಾವಿಕವಾಗಿ ಆತ್ಮೀಯರ ನಡು ವಿನ ಸಂಬಂಧಗಳನ್ನು ಇನ್ನಷ್ಟು ಮಧುರಗೊಳಿಸುವವು. ಈ ಹಬ್ಬದ ಆರತಿ, ಉಪಾಹಾರಗಳಲ್ಲಿ ಹತ್ತಿರದ ಮಿತ್ರರು ಪಾಲು ಗೊಂಡು ಸಡಗರವನ್ನು ಇನ್ನೂ ಹೆಚ್ಚಿಸುವರು.

೫. ಹೋಳಿ ಹಬ್ಬ

ಕನ್ನಡ ಕವಿ ಕುಲದ ಮನ ಸೂರೆಗೊಂಡ ಇನ್ನೊಂದು ಹಬ್ಬ **ಹೋಳಿ ಹಬ್ಬ.** ಹೋಲಿಕಾ ರಾಕ್ಷಸಿಯ ಪ್ರಸಂಗ ಹಾಗೂ ಕಾಮದಹನ ಈ ಎರಡರ ಸಮ್ಮಿಶ್ರಣವನ್ನು ಇಂದಿನ ಆಚರಣೆಯಲ್ಲಿ ಗುರುತಿಸಬಹುದು. ಇದು ಒಂದು ವಿಧದ ಅಗ್ನಿ ಉತ್ಸವ. 'ನಾರದ ಪುರಾಣ' ದಲ್ಲಿ ಹೋಲಿಕಾ ರಾಕ್ಷಸಿಯ ವೃತ್ತಾಂತ ಬರುತ್ತದೆ. ಹಿರಣ್ಯಕಶಿಪುವಿನ ಸೋದರಿ ಹೋಲಿಕಾ ಭಕ್ತ ಪ್ರಲ್ಹಾದನನ್ನು ಸುಟ್ಟು ಹಾಕಲು ಸಂಚು ಹೂಡಿದಳಂತೆ,

ಆಗ ಅಗ್ನಿದೇವ ಪ್ರಲ್ಹಾದನನ್ನು ರಕ್ಷಿಸಿ ಅವಳನ್ನೇ ಭಸ್ಮಗೊಳಿಸಿ ದನಂತೆ. ಹೋಲಿಕಾಳ ಕಥೆ ಇನ್ನೊಂದು ತಿರುವನ್ನು ಪಡೆದು ಪ್ರಚಾರದಲ್ಲಿದೆ. ಹೋಲಿಕಾ ಅಥವಾ ಢುಂಢಾ ಎಂಬ ಹೆಸರಿನ ರಾಕ್ಷಸಿಯೊಬ್ಬಳು ಅಯೋಧ್ಯೆಯ ಬಳಿಯ ಆರಣ್ಯದಲ್ಲಿ ವಾಸ ವಾಗಿದ್ದು, ಜನರಿಗೆ ಪೀಡೆ ಕೊಡುತ್ತಿದ್ದಳಂತೆ. ಅವಳನ್ನು ಸಂಹರಿಸಲು ನಾಡದೊರೆ ಮುಂದಾದಾಗ, ರಾಕ್ಷಸಿ ಶರಣಾಗತ ಳಾಗಿ, "ನನ್ನನ್ನು ನೋಡಿದಾಗ ಜನರು ಅಶ್ಲೀಲ ಮಾತುಗಳ ನ್ನಾಡಿ ಬಾಯಿ ಬಡಿದುಕೊಂಡರೆ, ನಾನು ಅಲ್ಲಿ ನಿಲ್ಲದೆ ದೂರ ಓಡಿ ಹೋಗುತ್ತೇನೆ"—ಎಂದು ವಚನ ಕೊಟ್ಟಳಂತೆ. ಈ ಮಾರ್ಗ ಅನುಸರಿಸಿ ಜನರು ಅವಳನ್ನು ದೂರ ಓಡಿಸುತ್ತಿದ್ದ ರಂತೆ. ಆದರೂ ಅವಳ ಉಪಟಳ ಹೆಚ್ಚಿದಾಗ, ಕುಪಿತ ಜನತೆ ಒಟ್ಟಾಗಿ ಆಕೆಯನ್ನು ಸುಟ್ಟು ಹಾಕಿದರಂತೆ, ಹೋಳಿಯ ಹಬ್ಬದ ಆಚರಣೆಯಲ್ಲಿ ಈ ಕಥೆಯ ಸಂಕೇತಗಳು ಗೋಚರಿಸುತ್ತಿರುವು ದನ್ನು ಗಮನಿಸಬೇಕು.

ಕಾಮದಹನ ಒಂದು ಪೌರಾಣಿಕ ಸನ್ನಿವೇಶವಾಗಿದ್ದು, ವಿಷ್ಣುಪುರಾಣ ಹಾಗೂ ಶೈವ ಪುರಾಣಗಳಲ್ಲಿ ಉಲ್ಲೇಖ ಪಡೆ ದಿದೆ. ಕಾಳಿದಾಸನ 'ಕುಮಾರ ಸಂಭವ'ದಲ್ಲಿ ಈ ಸನ್ನಿವೇಶ ಪ್ರಾಸಂಗಿಕವಾಗಿ ಸೊಗಸಾಗಿ ಮೂಡಿದೆ. ಕನ್ನಡದ ಭಕ್ತಕವಿ **ಹರಿಹರನ** 'ಗಿರಿಜಾ ಕಲ್ಯಾಣ' ಕಾವ್ಯದಲ್ಲಿ ಕಾಮದಹನ ಒಂದು ಮುಖ್ಯ ಪ್ರಸಂಗವಾಗಿ ಅರಳಿದೆ. ತಾರಕಾಸುರನ ಉಪಟಳದಲ್ಲಿ ಜಗ ಬೇಸತ್ತಿತ್ತು. ಶಿವ-ಗಿರಿಜೆಯರ ಸಮಾಗಮದಿಂದ ಹುಟ್ಟುವ ಕುಮಾರ (ಷಣ್ಮುಖ)ನಿಂದ ತಾರಕಾಸುರನ ಸಂಹಾರ

ಆಗಬೇಕಿತ್ತು. ಈ ಮೊದಲು ಗಾಢ ತಪಸ್ಸಿನಲ್ಲಿದ್ದ ಶಿವನನ್ನು ಎಬ್ಬಿಸಬೇಕಿತ್ತು. 'ಶಿವ ತಪ ಕೊರಗಿಸಲು ನೀನೇ ಬಲ್ಲೆ, ನೀನೆ ಸಮರ್ಥಂ'– ಎಂದು ವಿಷ್ಣು ಕಾಮನನ್ನು ಹುರಿದುಂಬಿಸಿದ. ಪಂಚಬಾಣ ಕಾಮ, ಶಿವನ ತಪೋಭೂಮಿ ಹೇಮಕೂಟ ಅಭಿಮುಖನಾಗಿ ಹೊರಟ, ಮಾರ್ಗ ಮಧ್ಯೆ ಅಪಶಕುನಗಳು ಅವನನ್ನು ಕಂಗೆಡಿಸಿದವು. ಶಿವನನ್ನು ಕೆಣಕಿ ಬದುಕಬಲ್ಲೆನೆ ಎಂಬ ಅಳುಕು ಅವನನ್ನು ಇರಿಯ ತೊಡಗಿತ್ತು. ಹೇಮಕೂಟ ದ್ವಾರದಲ್ಲಿ ತಪ ನಿಂತಿದ್ದ ನಂದೀಶ್ವರನ ಹೂಂಕಾರ ಕಾಮ ಸೈನ್ಯವನ್ನು ಹಿಮ್ಮೆಟ್ಟಿಸಿತು. ಅಷ್ಟರಲ್ಲಿ ಕಾಮನಿಗೆ ಉಸಿರು ಬಂದಂತೆ ಗಿರಿಜೆ ಅಲ್ಲಿ ಕಾಣಿಸಿಕೊಂಡಳು. ಅವಳ ಪುಷ್ಪಕದ ಮರೆಯಲ್ಲಿ ನಂದಿಯ ಕಣ್ಣು ತಪ್ಪಿಸಿ ಸೈನ್ಯ ಒಳನುಗ್ಗಿತು.

ಗಿರಿಜೆ ಶಿವಾರ್ಚನೆ ಗೈಯ್ಯುತ್ತಿದ್ದಂತೆ ಕಾಮ ಬೆಡಗಿನಿಂದ ಬಿಲ್ಲನ್ನು ಹೆದೆಗೇರಿಸಿದ. ಆಗ ಕವಿಯ ಕಣ್ಣಿಗೆ ಕಾಮ, 'ಶೃಂಗಾರ ಕೋಡಿಟ್ಟಂತೆ, ಲಾವಣ್ಯ ಶೌರ್ಯಾಂಗ ಬಡೆವಂತೆ' ಕಂಡ. ಪಂಚ ಬಾಣದ ಹೊಡೆತಕ್ಕೆ ಕಣ್ತೆರೆದ ಶಿವ, ಗಿರಿಜೆಯನು ಕಂಡು, ಈ ಮಾನಿನಿ ಏಕಿಲ್ಲಿ ಎಂದು ದೃಷ್ಟಿ ಹರಿಸಿದಾಗ, ಕಾಮ ಕಣ್ಣಿಗೆ ಬಿದ್ದ. 'ನೋಡದ ಮುನ್ನಂ ಕೋಪಂ ನಾಡೆ ಒತ್ತರಿಸಿತು.' ಶಿವನ ಮುನಿಸು ಅವನ ಹಣೆಗಣ್ಣಿಂದ ಹೊರ ಹೊಮ್ಮಿತು. 'ಇಟ್ಟಣಿಸಿ ಘುಂಡು ಘುಂಡಿಸಿ ಕಿಡಿಗುಟ್ಟಿ ಕನಲ್ದಡಿಸಿ, ಬಿಸುಗಣ್ಣುರಿ ಪೊರಮಟ್ಟುದು ಸುಟ್ಟುದು ರತೀಶನಂ ನಿಮಿಷಾರ್ಧಂ. ...ಥಂ ಧಗಿಲ್ ಧಗಿಲ್ ಧಗಿಲೆನೆ ತಟ್ಟಿದುದು, ಮುಟ್ಟಿತು.. ಸುಟ್ಟಿತು, ಶಿಂದು ತೇಗಿತ್ತು... ಕಾಮ ಉರಿದು ಕರಿಮುರಿವೊದಂ.....'

ಉರಿಗೆ ಸಿಕ್ಕ ಮನ್ಮಥ ಬೆಂದ ನುಲಿಯಂತೆ ನಿಂತನು. ಮುಂದೆ ಗಿರಿಜೆಯ ಮಧ್ಯಸ್ಥಿಕೆಯಿಂದ, ಶಿವ ಕರುಣೆಯ ಮೂಲಕ ಕಾಮ 'ಅನಂಗ' ನಾಗಿ ಅವತರಿಸಿದನಷ್ಟೆ.

ಕವಿ **ವಿರೂಪಾಕ್ಷ ಪಂಡಿತನ** 'ಚೆನ್ನಬಸವ ಪುರಾಣ' ದಲ್ಲಿ ಕಾಮದಹನದ ಇನ್ನೊಂದು ಸುಂದರ ಚಿತ್ರವಿದೆ. ಇಲ್ಲಿಯ ಕಾಮನ ಚೈತ್ರಯಾತ್ರೆ ನಿಜಕ್ಕೂ ಕಣ್ಣಿಗೆ ಹಬ್ಬ. ಕಾಮ ರತಿ ದೇವಿಯೊಡನೆ ಹೂದೇರ ಏರಿ, ಶಿವನನ್ನು ಗೆಲ್ಲಲು ಹೊರಡು ವನು. ಕಾಮನ ಸೈನ್ಯದ ಮುಂಚೂಣಿಯಲ್ಲಿ ಋತರಾಜ ವಸಂತ, ಮಾವಿನ ಮರಗಳೇ ಆನೆಗಳು, ಗಿಳಿಗಳೇ ಕುದುರೆ ಗಳು. ಚಂದ್ರನೇ ಮಂತ್ರಿ, ಕಾಂತಾಜನವೇ ಕಾಲಾಳುಗಳು ! ಮಾರ್ಗ ಮಧ್ಯದಲ್ಲಿ ಪಟ್ಟದ್ಗಾನೆ ಮುಗ್ಗರಿಸಿತು, ನರಿಗಳು ಊಳಿ ಟ್ಟವು, ಮೊಲವೊಂದು ಸೈನ್ಯ ಸೀಳಿಕೊಂಡು ಹೋಯಿತು. ಅಶ್ವ ಗಳು ನೊಗದಿಂದ ಜಾರಿದವು. ಆದರೂ ಧೃತಿಗೆಡದ ಕಾಮ 'ಬಂದುದಂ ಕಾಂಬೆ' ಎಂದು ಮುನ್ನಡೆದ. ಗಿರಿಜೆಯ ನೆರವಿ ನಿಂದ ಆತ ಪಂಚಬಾಣಗಳನ್ನು ಪ್ರಯೋಗಿಸಿದಾಗ, ಶಿವನ ಹೃದಯದಲ್ಲಿ ಅರಿವು ಮೂಡಿತು. ಅದರ ಹಿಂದಿನಿಂದ ಶಿವನ ಉರಿಗಣ್ಣು ಕಾಮನನ್ನು ದಹಿಸಿತು. 'ಮದನನ ಕಳೇವರಂ ಕೂಡೆ ಭುಗಿಭುಗಿಲೆಂದು ಬೆಂದು ಪೋದುದು' ಶಕ್ತಿ–ಪುರುಷರ ಸಮಾಗಮಕ್ಕೆ ನಾಂದಿಯಾಗಿ ಕಾಮನು ಹುತಾತ್ಮನಾದನು. ಕಾಮದಹನದ ನಂತರ ಕೂಡ ಶಿವನ ಕೋಪ ತಣಿಯಲಿಲ್ಲವಂತೆ. ಆ ಭಸ್ಮವನ್ನು ಸರ್ವಾಂಗಕ್ಕೆ ಲೇಪಿಸಿಕೊಂಡ ಶಿವ ಅಲ್ಲಿಂದ ನಿರ್ಗಮಿಸಿದ.

ಜೈನ ಕವಿಗಳ ಕಾವ್ಯಗಳಲ್ಲಿ ಈ ಪ್ರಸಂಗ ಕಾಮನ ಗೆಲುವು ಎಂದು ಚಿತ್ರಿತವಾಗಿದೆ, ಜೈನ ಸಂಪ್ರದಾಯದಲ್ಲಿ ಶಿವನಿಗೆ ಶಕ್ತಿಶಾಲಿ ಎಂದು ಮನ್ನಣೆ ಇಲ್ಲ. ಅಲ್ಲಿ ಕಾಮ ಜಿನಾಧೀನ ನಾಗಿಯೂ ಪ್ರಬಲನಾಗಿರುವನು, **ನಾಗಚಂದ್ರನ** 'ಮಲ್ಲಿನಾಥ ಪುರಾಣ'ದಲ್ಲಿಯ ಕಾಮನ ಹೆಗ್ಗಳಿಕೆ ಇದು-'ಆ ವೇಶ್ಯಾವಾಟಿ ದೊಳ್ ಧೂರ್ಜಟಿಯ ನೊಸಲ ಕಣ್ಣಂ ಸ್ಮರನಂದೆ ಪೊಯ್ದಂ.' ಶಿವನ ಹಣೆಗಣ್ಣಿನ ಮೇಲೆ ಕೈಯೆತ್ತುವ ಕೆಚ್ಚು ಕಾಮನದು ! ನೇಮಿಚಂದ್ರನ 'ಲೀಲಾವತಿ' ಹಾಗೂ **ಆಂಡಯ್ಯನ** 'ಕಬ್ಬಿಗರ ಕಾವ' ಕಾವ್ಯಗಳಲ್ಲಿ ಮನ್ಮಥ ವಿಜಯದ ಚಿತ್ರಗಳಿವೆ, 'ಕಬ್ಬಿಗರ ಕಾವ'ದಲ್ಲಿಯ ಕಾಮವಿಜಯದ ಸನ್ನಿವೇಶ ತುಂಬ ರಮ್ಯ ವಾಗಿದೆ. ಶಿವನು ತನ್ನ ಬಳಗದ ಚಂದ್ರನನ್ನು ಸೆರೆಹಿಡಿದಿರುವ ನೆಂದು, ಕರ್ಮವಿಲ್ಲ (ಕಾಮ) ಅವನ ಮೇಲೆ ದಾಳಿ ಮಾಡು ವನು, ಘನಘೋರ ಹೋರಾಟದ ಕೊನೆಯಲ್ಲಿ ಕಾಮನ ಹೊಡೆ ತಕ್ಕೆ ಶಿವ ಅರೆವೆಣ್ಣಾದ. ಶಿವನ ಅರ್ಧನಾರೀಶ್ವರ ಸ್ವರೂಪದ ವಿಡಂಬನೆ ಇದಾಗಿದೆ. ಸೋತ ಶಿವನೂ ಸಹ ಕಾಮನಿಗೆ ಶಾಪ ಕೊಡುವನು–'ನಿನ್ನ ಪ್ರಿಯತಮೆಯಿಂದ ಅಗಲಿ, ಯಾರೂ ಅರಿಯದಂತೆ, ಎಲ್ಲಿಯಾದರೂ ನಿನ್ನನ್ನೇ ನೀ ಮರೆತು ಇರು!'

ಗ್ರಾಮಾಂತರ ಭಾರತದಲ್ಲಿ ಕಾಮನ ಹಬ್ಬ ತುಂಬ ಜನಪ್ರಿಯವಾಗಿದೆ. ಜಾನಪದ ಕವಿ ಕಾಮದಹನಕ್ಕೆ ವಿಶಿಷ್ಟ ಕಾರಣವೊಂದನ್ನು ಕಲ್ಪಿಸಿರುವುದನ್ನು ಗಮನಿಸಬೇಕು.

ಪಾರೋತಿ ಮಾದೇವ ಸಿರಿ ಸಬದಾಗಿರಲು
ಪಾರೋತಿ ಹೇಳ ಚೆಲುವ್ಯಾರ। ಕೇಳುದಕ
ತೀರ ಚೆಲುವಾನ ಕಾಮಣ್ಣ॥

(ಕೂಡಿದ ಸಭೆಯಲ್ಲಿ ಶಿವ ಪಾರ್ವತಿಯನ್ನು ಕೇಳಿದ 'ಜಗವಲ್ಲಿ ಅತಿ ಚೆಲುವನಾರು ?' ಅವಳು, ಕಾಮ ಚೆಲುವ ಅಂದಳಂತೆ.)

ಸಿಟ್ಟಿಗೇಳುತ ಶಿವನು ಬಿಟ್ಟಾನೊ ಉರಿಗಣ್ಣು
ಸುಟ್ಟು ಬೂದ್ಯಾದೊ ಕಾಮಣ್ಣ ! ರತಿದೇವಿ
ಹೊಟ್ಟಿ ಬಡಕೊಂಡು ಅಳತಾಳೊ ॥

ಅಳುವ ಬಾಲಿಯು ಕಂಡು, ಕಳವಳವೊ ಸಬದಾಗ
ಅಳಬ್ಯಾಡ ರತಿಯೆ ಮನಿಸೊಸಿಯೆ । ಕಾಮಣ್ಣ
ಮನದಾಗ ಮೂಡಿ ಬರತಾನ ॥

ಹೊರಳಾಡಿ ಅಳಬೇಡ, ಎರವಾದ ಕಿಚ್ಚೀಗಿ
ಕೆರೆದಾಗ ಬರುವ ರತಿದೇವ । ಮನದಾಗ
ಚಿರವಂತ ಕಾಮ ನೆನೆದಾಗ ॥

ರತಿ–ಕಾಮ ಇವರ ಚಿರಂತನ ದಾಂಪತ್ಯದ ಸೊಗಸು ನಮ್ಮ ಜನಪದ ಕವಿ ಕಲ್ಪನೆಯಲ್ಲಿ ಸುಂದರವಾಗಿ ಅರಳಿದೆ–

ಆನಿಗಂಬಾರಿ ಚೆಂದ, ಕುದರೀಗೆ ತಡಿ ಚೆಂದ
ಸದರೀಗೆ ಚೆಂದ ಕಾಮಣ್ಣ । ಬಗಲಾಗ
ರೂಪಕ ಚೆಂದ ರತಿದೇವಿ ॥

('ಕನ್ನಡ ಜನಪದ ಗೀತಗಳು')

(ಸಂ) ಡಾ. ಬಿ. ಎಸ್. ಗದ್ದಗಿಮಠ)

ಈ ಹಬ್ಬದಲ್ಲಿ ಜನ ಕುಳ್ಳು-ಕಟ್ಟಿಗೆಗಳನ್ನು ಸಾಮೂಹಿಕ ವಾಗಿ ಸಂಗ್ರಹಿಸಿ ಕಾಮನನ್ನು ಸುಡುವರು. ಈ ಬೂದಿಯನ್ನು ಭೂಮಿಗೆ ಸೇರಿಸಿದರೆ, ಸಮೃದ್ಧ ಬೆಳೆ ಬರುವುದೆಂದು ರೈತರ

ನಂಬಿಕೆ. ರೈತರು ಕಾಮನ ಬೂದಿಯನ್ನು ಮನೆಗೆ ತಂದು ಅದನ್ನು ಬಿತ್ತುವ ಬೀಜಗಳಲ್ಲಿ ಬೆರೆಸಿ ಇಡುವರು. ಜನಪದ ಕವಿ ಈ ಹಬ್ಬದ ಸಂಭ್ರಮವನ್ನು ತನ್ನ ಗೀತಗಳಲ್ಲಿ ಸೂರೆ ಗೈದಿರುವನು–

ಹೋಳಿಯಾಡದ ನಾಡು, ನಾಳೆನದೆ ಕಾಡಾತೊ
ಗೋಳಾತೊ ಜನಕ ಎಯಲಾತೊ । ಮಳೆ
ಹೋಗಿ
ಹಾಳಾತೊ ಪಿಡುಗೆದ್ದು ದಿನದಿನಕೊ ॥

ಋತುರಾಜ **ವಸಂತನ** ಆಗಮನವನ್ನು ಕಾಮದಹನ ಹಬ್ಬ ಮುಂದಾಗಿ **ಸಾರುತ್ತ** ಬರುತ್ತದೆ. ಈಗ ನಿಸರ್ಗದಲ್ಲಿ ಹೊಸ ಚೈತನ್ಯ ಸೂರೆಯಾಗುವುದು, '**ಅಂಬಿಕಾತನಯ ದತ್ತ**' ರು ಕಂಡ 'ವಸಂತ ಮುಖ'ವಿದು—

ಉದಿತ ದಿನ, ಮುದಿತ ವನ
ವಿಧ ವಿಧ ವಿಹಗ ಸ್ವನ
ಇದುವೆ ಜೀವ, ಇದು ಜೀವನ
ಪವನದಂತೆ ಪಾವನ

('ವಸಂತ ಮುಖ' —ಸುಖೀಗೀತ)

ಮನುಷ್ಯ ನಿಸರ್ಗದ ಒಂದು ಅಂಗ ಆಗಿರುವುದರಿಂದ ಅಲ್ಲಿಯ ಚೈತನ್ಯ ಬುಗ್ಗೆ ಅವನಲ್ಲಿ ಹಿಗ್ಗಾಗಿ ಹೊರಹೊಮ್ಮು ವುದು, ಫಾಲ್ಗುಣದ ಬಾಗಿಲಲ್ಲಿ ವಸಂತ ಹಣಿಕಿಕ್ಕಿದಾಗ. **'ಆನಂದ ಕಂದ'** ರು ಅವನನ್ನು ಗೌರವಾದರಗಳಿಂದ ಬರಮಾಡಿ ಕೊಳ್ಳುವರು.

ಜಯ ಜಯ ಜಯ ಫಾಲ್ಗುಣ
ಜಯೋತ್ಸಾಹ ಕಾರಣ !
ನವಯುಗದಾಗಮನವರಿತು
ನಿಲಿಸುವೆ ನೀ ತೋರಣ !
....
ಹೊಸ ಹರಯಕೆ ಕುಸುರುಗೊಡುವ
ನನೆಯ ಬಿಲ್ಲನಣ್ಣ !
ಹೊಸ ವರುಷಕೆ ಬಸಿರನಿತ್ತು
ನೀ ಮುಚ್ಚುವೆ ಕಣ್ಣ !

('ಜಯ ಜಯ ಫಾಲ್ಗುಣ'—ಒಡನಾಡಿ)

ಅನಂಗನಾಗಿಯೂ ಕಾಮದೇವ ಮನುಕುಲದ ಉದಯದಿಂದ ತುಂಬ ಶಕ್ತಿಶಾಲಿಯಾಗಿಯೆ ಉಳಿದಿರುವನಷ್ಟೆ. ಅರಿಷಡ್ವರ್ಗದಲ್ಲಿ ಅವನನ್ನು ಮೊದಲನೆಯವನನ್ನಾಗಿ ಇಟ್ಟರೂ ಎಲ್ಲರೂ ಅವನನ್ನು ಆಪ್ತಮಿತ್ರನನ್ನಾಗಿ ಮಾಡಿಕೊಂಡವ ! ಕಾಮನಿಗೆ ಸೋಲೆಂಬುದಿಲ್ಲ, ಸದಾ ಜಯ ಭೇರಿ ಅವನದು ಎಂದು '**ಕುವೆಂಪು**' ಅವರು ಹಾಡುವರು. ಕಾಮನನ್ನು ಹಿಡಿದವರೆಲ್ಲ ಸೋತು ಶರಣಾಗಿರುವರು, ಅವನನ್ನು ಬಿಟ್ಟವರೆಲ್ಲ ಸೋಲನ್ನು ಒಪ್ಪದ ಕಪಟಿಗಳು ಎಂದು ಕವಿ ಬಗೆಯುವನು.

ಓ ರತಿಪತಿಯೋ,
ಹರಿ ನಿನ್ನನು ಪಡೆದನು ಎಂದು
ತಿಳಿದಿದ್ದವು ಶಾಸ್ತ್ರಗಳಂದು;
ಆ ಹರಿಯನೆ ನೀ ಪಡೆದಿಹೆ ಎಂದು

ಹೇಳುತ್ತಿವೆ ಶಾಸ್ತ್ರಗಳಿಂದು !

....

ರಾವಣ ವಧೆಯೂ ಕಾಮನ ಚೇಷ್ಟೆ !
ಭೀಮನ ಗದೆಯೂ ಕಾಮನ ಚೇಷ್ಟೆ !
ರಾಮಾಯಣ ವಾಲ್ಮೀಕಿಯ ಕಾಮ
ಭಾರತವೆಂಬುದು ವ್ಯಾಸನ ಕಾಮ !

....

('ಕಾಮದೇವ' – ನವಿಲು)

ಶ್ರೀ ಕೆ. ಎಸ್. ನರಸಿಂಹ ಸ್ವಾಮಿ ಅವರು ಕಾಮ ತುಂಬ ಗಹನ ವಿಷಯವೆಂದು ಬಗೆಯುವರು. ರತಿ ಹಾಗೂ ಗಿರಿಜೆಯರ ದೀನ ಮೊರೆಗೆ ಶಿವ ಮೋಸ ಹೋದನೆಂದು ಕವಿ ಭಾವಿಸುವನು. ಕಾಮನೊಳಗೆ ಅರ್ಧವನ್ನು ಮಾತ್ರ ಉರಿಸಲು ಶಿವನಿಗೆ ಶಕ್ಯವಾಯಿತು, ಆ ಉಳಿದ 'ಅರ್ಧ ಕಾಮ' ಗೈದ ಅನರ್ಥಗಳು ಒಂದೆರಡಲ್ಲ. **ಕೆ. ಎಸ್. ಎನ್.** ಹೇಳಿರುತ್ತಾರೆ–

ಆ ಅರ್ಧ ಕಾಮನೇ ರಾಮನನು ಕೆರಳಿಸಿದ
ಪಾಂಡವರ ನರಳಿಸಿದ ಕಾಡುಗಳಲಿ
ಲೋಕದಲಿ ಹೆಣ್ಣು ಗಂಡೆಲ್ಲ ಕಾಮನ ಬಳಗ
ಅವನದೇ ಆಡಳಿತ ರಾಜ್ಯಗಳಲಿ..

('ಕಾಮದಹನ' ಮೈಸೂರು ಮಲ್ಲಿಗೆ)

ಕವಿ ಎಲ್ಲೆಲ್ಲೂ ಮಕರ ಧ್ವಜನ ದಿಗ್ವಿಜಯ ಕಾಣುವನು. ಶಿವನಂಥ ಶಕ್ತಿಶಾಲಿಗೇ ಕಾಮನನ್ನು ಪೂರ್ಣ ಉರಿಸಲಾಗಲಿಲ್ಲ, ಇನ್ನು ಹುಲು ಮಾನುಜರ ಅಳವೇನು? ಕಾಮದಹನ ಒಂದು

ಅರ್ಥವಿಲ್ಲದ ಕ್ರಿಯೆ ಎಂದು ಕವಿಯ ವಿಚಾರ. ಇದು ಟೊಳ್ಳು ತೃಪ್ತಿ ಪಡೆವ ಹಂಬಲವಾಗಿದೆ. ಕಾಮನನ್ನು ಗೆಲ್ಲಲಾಗದವರು ಅವನ ಪ್ರತಿಕೃತಿಯನ್ನು ದಹಿಸಿ ಸಮಾಧಾನ ತಂದುಕೊಳ್ಳುವರು ! ಕಟ್ಟಿಗೆಯ ರಾಶಿಯ ಸೂತ್ತಲೂ ನೂರಾರು ಜನ ನೆರೆದಿದ್ದಾರೆ. ಅವರ ವಿಕೃತ ವೇಷ ಅವರ ಮನೋವಿಕಾರಕ್ಕೆ ಕನ್ನಡಿ ಹಿಡಿಯುತ್ತಿದೆ. **ಕೆ. ಎಸ್. ಎನ್.** ಇಂದಿನ ಕಾಮದಹನದ ವಿಡಂಬನೆಯನ್ನು ಕಟುವಾಗಿ ಮಾಡಿರುವರು.

ದೇವತೆಗಳೆಲ್ಲ ಕೈ ಬಿಟ್ಟ ಕಾಮನ ಕೊಲೆಗೆ
ನರಕುರಿಗಳಿಂದಲ್ಲಿ ನೆರೆಯುತಿಹರು
ಬೇಡವಾಗಿರುವೆಲ್ಲ ಚಿಂದಿ ತೊಟ್ಟಿಲನುರಿಗೆ
ಚಾಚಿಹರು, 'ಹೋ' ಎಂದು ಕೂಗುತಿಹರು.

('ಕಾಮದಹನ'– ಮೈಸೂರು ಮಲ್ಲಿಗೆ)

ನಿಜ ಅರ್ಥದಲ್ಲಿ ಕಾಮದಹನ ಹೊಸ ಅರಿವಿನ ಹಬ್ಬವಾಗಿದೆ. ಕಾಮ ದೈಹಿಕ ಬಯಕೆಯಾಗಿದ್ದು, ಅದನ್ನು ದಹಿಸಿ ಪ್ರೇಮ ಅರಳಬೇಕೆಂಬುದು ಇದರ ಸಂದೇಶ. ಶಿವನ ಹಣೆಗಣ್ಣು ಜ್ಞಾನಚಕ್ಷು, ಕಾಮ ದುರಾಶೆಯ ಪ್ರತೀಕ. ಇಂತು ಕಾಮ ದಹನ ದುರಾಶೆಯ ದಮನವಾಗಿದೆ. ಈ ಹಬ್ಬ ಉತ್ಸಾಹ, ಉಲ್ಲಾಸಗಳಿಗೆ ವೀಳ್ಯ ಎತ್ತಿದೆ. ಇಲ್ಲಿಯ ಓಕುಳಿಯಾಟಕ್ಕೆ ಪೌರಾಣಿಕ ಹಾಗೂ ಐತಿಹಾಸಿಕ ಪರಂಪರೆ ಇದೆ. ಕೃಷ್ಣಗೋಪಿಕಾ ಸ್ತ್ರೀಯರ ಸರಸ ಕ್ರೀಡೆಗಳಲ್ಲಿ ಓಕುಳಿ ಅಮರತ್ವ ಪಡೆದಿದೆ. ಓಕುಳಿ ಚೆಂಬಣ್ಣದ ನೀರು. ಪ್ರೀತಿಯ ಸಾಂಕೇತಿಕ ಬಣ್ಣ ಕೆಂಪು ತಾನೆ? ಹೋಳಿಯ ದಿನದಂದು ಹೋಳಿಗೆಯ

ಅಡಿಗೆ ಮಾಡುವ ರೂಢಿ ಪ್ರಚಲಿತವಿದೆ. 'ಹೊಯ್ಕೊಂಡ ಬಾಯಿಗೆ ಹೋಳಿಗೆ ತುಪ್ಪ'ಎಂದು ಗಾದೆಯೊಂದು ಹೇಳುತ್ತದೆ. ಹೋಳಿಯು ಹಬ್ಬದ ಬಣ್ಣದ ಆಟ ಕೆಲವೊಂದು ಊರುಗಳಲ್ಲಿ ರಂಗಪಂಚಮಿಯು ವರೆಗೂ ನಡೆದು, ಹಬ್ಬದ ಸಡಗರವನ್ನು ವಿಸ್ತರಿಸುವುದು.

ಓಕುಳಿಯಾಟ ವಸಂತೋತ್ಸವದ ಒಂದು ಅಂಗವಾಗಿ ಉಳಿದಿದೆ. ವಿಜಯನಗರ ಅರಸರ ಕಾಲದಲ್ಲಿ ಈ ಉತ್ಸವ ಸಡಗರದ ಶಿಖರ ತಲುಪಿತ್ತು. ಕೃಷ್ಣದೇವರಾಯನ ಕಾಲದಲ್ಲಿ ನಡೆದ ಒಂದು ಸಾಂಪ್ರದಾಯಿಕ ವಸಂತೋತ್ಸವವನ್ನು ಕಣ್ಣಾರೆ ಕಂಡ ಪೋರ್ತುಗೀಸ್ ರಾಯಭಾರಿ ಡಾಮಿಂಗೊ ಪಾಯಸ್‌ನು ಬೆರಗುಪಟ್ಟಿರುವನು, ಸ್ವತಃ ಸಮ್ರಾಟನೂ ಮಾಂಡಲಿಕ ಅರಸರೂ ವಿಳಾಸಿನಿಯರೊಂದಿಗೆ ಬಣ್ಣದ ನೀರಿನ ಎರಚಾಟ ನಡೆಸುತ್ತಿದ್ದರಂತೆ, ಪ್ರಜೆಗಳೂ ಈ ಉತ್ಸವದಲ್ಲಿ ಪಾಲುಗೊಳ್ಳುತ್ತಿದ್ದದೊಂದು ವಿಶೇಷ. ಇಟಾಲಿಯನ್ ಪ್ರವಾಸಿ ನಿಕೊಲೊ ಕೊಂಟಿ ತನ್ನ ಪ್ರವಾಸ ಕಥನದಲ್ಲಿ ಹೇಳಿದಂತೆ, "ಈ ದಿವಸಗಳಲ್ಲಿ ಪ್ರಜೆಗಳು ಕೆಂಪು-ಕೇಸರಿ ಬಣ್ಣದ ನೀರನ್ನು ಪರಸ್ಪರರಿಗೆ ಎರಚುತ್ತ ಅಡ್ಡಾಡುವರು, ಇಂತಹ ಬಣ್ಣದ ನೀರು ತುಂಬಿದ ಪಾತ್ರೆಗಳನ್ನು ದಾರಿಯ ಮೇಲೆ ಇರಿಸಿಕೊಂಡು ನಿಂತಿರುವರು. ಈ ಬಣ್ಣದ ಆಟದಲ್ಲಿ ಅರಸುಮನೆತನದವರು, ಉನ್ನತ ಅಧಿಕಾರಿಗಳು ಭಾಗವಹಿಸಿರುವರು, ಈ ಆಟ ನಿಜಕ್ಕೂ ಕಣ್ಣೆಗೊಂದು ಹಬ್ಬ."

ಕನಕದಾಸರ 'ಮೋಹನ ತರಂಗಿಣಿ' ಕಾವ್ಯದಲ್ಲಿ ವಿಜಯನಗರದಲ್ಲಿ ಪ್ರಚಾರದಲ್ಲಿದ್ದ ಓಕುಳಿ ಆಟದ ಪ್ರತಿಬಿಂಬ

ಹುದುಗಿದೆ. ಈ ಕಾವ್ಯದಲ್ಲಿ ಕಾಮನ ಕಥೆ ಕಷ್ಣ ಕಥೆಯೊಡನೆ ಬೆರೆತು ಕೊಂಡಿದೆ, ಶಿವ ಕರುಣೆಯಿಂದ ರತಿ ಪುನಃ ಮುತ್ತೈದೆ ಯಾಗುವಳು. ರುಕ್ಮಿಣಿಯು ಗರ್ಭದಲ್ಲಿ ಪ್ರದ್ಯುಮ್ನನಾಗಿ ಜನಿಸಿದ ಕಂದರ್ಪನನ್ನೇ ರತಿ ಮತ್ತೆ ಕೈ ಹಿಡಿಯುವಳು, ಅವರ ವಸಂತ ಕೇಳಿಯಲ್ಲಿ ಕವಿ ಕಾಮದಹನದ ನೆನಪು ಬಿತ್ತಿರುವನು– 'ಹರನ ಉರಿಗಣ್ಣಿಂದ ಬಂದ ಸಂತಾಪ ನಿನ್ನ ಮೈಯೊಳಗಿದೆ, ತಂಪುಗೊಳ್ಳೆಂದು ತರಳೆ ನೂಕಿದಳು ತಂಗೊಳದೆ.' ಆದಿಕವಿ ಪಂಪನಲ್ಲಿ ಉಲ್ಲೇಖ ಪಡೆದ 'ಮಧು ಮಹೋತ್ಸವ' ವಸಂತೋತ್ಸವದ ಪ್ರತಿರೂಪವೇ ಆಗಿದೆ.

—o—

ಉಪನ್ಯಾಸ ಗ್ರಂಥ ಮಾಲೆಯ ಕೆಲವು ಇತ್ತೀಚಿನ ಪ್ರಕಟನೆಗಳು

೧. ಶರಣರ ಆರ್ಥಿಕ ಚಿಂತನೆ —ಬಿ.ಎ. ಪಾಟೀಲ
೨. ಜನಪದ ತ್ರಿಪದಿಗಳಲ್ಲಿ ಜೀವನ ಮೌಲ್ಯ
—ಎಂ.ಬಿ. ಹೂಗಾರ
೩. ಮಾನವ ದೇಹದ ಮಿಲಿಟರಿ ಪಡೆ
—ಸ.ಜ. ನಾಗಲೋಟಿಮಠ
೪. ಪ್ರೇಮಚಂದರ ಸಣ್ಣಕತೆಗಳು —ಆರ್.ಎ. ಹೆಗಡೆ
೫. ಪರಿಸರ ಸಂರಕ್ಷಣೆ ಹಾಗೂ ಆರ್ಥಿಕಾಭಿವೃದ್ಧಿ
ಎನ್. ಆರ್. ರಾವ್
೬. ಚಂಡಮಾರುತಗಳು —ಎಸ್.ಜಿ. ಕದರಮಂಡಲಗಿ
೭. ವಿಜ್ಞಾನವು ಅಪರಾಧಿಗಳನ್ನು ಹಿಡಿದುಕೊಡಬಲ್ಲುದೆ ?
—ಬಿ.ಎಸ್. ಗಿರೆಪ್ಪಗೌಡರ
೮. ಪ್ಲೇಟೋನ ಆದರ್ಶ ರಾಜ್ಯ —ಟಿ. ಮಲ್ಲಪ್ಪ
೯. ಮಕ್ಕಳ ಮಾರಕ ರೋಗಗಳು ಹಾಗೂ ಪ್ರತಿಬಂಧಕ ಉಪಾಯಗಳು —ಆರ್.ಸಿ. ಅಗಡಿ
೧೦. ಎಲ್ಲಮ್ಮನ ಜೋಗತಿಯರು ಹಾಗೂ ದೇವದಾಸಿ ಪದ್ಧತಿ
—ಎನ್.ಕೆ. ಕಡೆತೋಟದ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೫೮೦ ೦೦೩